ಆಂತರಿಕ ಪ್ರಸಾರಕ್ಕಾಗಿ ಮಾತ್ರ

ಸಂಪುಟ 4 ಸಂಚಿಕೆ 1 ಜನವರಿ 2011

ಶ್ರೀ ರಾಮಚಂದ್ರ ಮಿಷನ್®

India ECHOES
ONE WORLD ONE HUMANITY
2011



## ಹೈದರಾಬಾದ್ – ನವೆಂಬರ್ 11–18

ದಿನಾಂಕ 11 ರಂದು ಹೈದರಾಬಾದ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಗುರುಗಳು, 20 ಕಿ.ಮಿ ದೂರವಿರುವ ಕಾನ್ಹಾ ಶಾಂತಿವನಂ ಯೋಜನೆಯ ಸ್ಥಳಕ್ಕೆ ಹೊರಟರು. ಒಂದು ವೃಕ್ಷದ ಕೆಳಗೆ ನಿರ್ಮಿಸಲಾಗಿದ್ದ ಚಿಕ್ಕದಾದರೂ ಬಹಳ ಸುಂದರವಾದ ಕುಟೀರವನ್ನು ಪ್ರವೇಶಿಸಿದ ಅವರು ಆಯಾಸಗೊಂಡಂತೆ ಕಂಡರೂ ಉಲ್ಲಾಸದಿಂದಿದ್ದರು. ಯಾರೋ ಒಬ್ಬರು ಆ ಸ್ಥಳವನ್ನು ಕುರಿತು ಮೆಚ್ಚುಗೆ ಸೂಸಿದಾಗ, ಗುರುಗಳು ನಾವೀಗ 'ತೊಟ್ಟಿಲಲ್ಲಿರುವ ರಾಮ'ನನ್ನು ನೋಡುತ್ತಿರುವೆವಷ್ಟೆ ಎಂದು ನುಡಿದಾಗ, ಮುಂದಿರುವ ಕಾರ್ಯದ ಅಗಾಧತೆಯ ಸುಳಿವು ನೀಡಿತು. ಅವರು ತಮ್ಮ ಕಾಲೇಜಿನ ಸಹಪಾಠಿ ಹಾಗು ಹಳೆಯ ಮಿತ್ರರಾದ ಪ್ರಸ್ತುತ ಹೈದರಾಬಾದಿನಲ್ಲಿ ನೆಲೆಸಿರುವ ಶ್ರೀ ಡಿ.ಎಸ್.ರಾವ್ ಜೊತೆ ಭೋಜನ ಮಾಡಿದರು. ಗುರುಗಳು ಮತ್ತು ಶ್ರೀ ರಾವ್ ತಮ್ಮ ಬೆನಾರಸ್ ಹಿಂದೂ ವಿಶ್ವವಿದ್ಯಾಲಯದ ದಿನಗಳ ನೆನಪಿನ ಮೂಟೆಯನ್ನು ಕೆದಕುತ್ತಿದ್ದನ್ನ ನೋಡುವುದೇ ಒಂದು ಸೊಗಸಾಗಿತ್ತು. ಸಂಜೆಯ ವೇಳೆಗೆ, ಅವರು ಸ್ಥಳೀಯ ಅಭ್ಯಾಸಿಯೊಬ್ಬರ ಮನೆಗೆ ರಾತ್ರಿ ತಂಗಲೆಂದು ಹೊರಟರು.

ಮರುದಿನ ತುಮ್ಮುಂಟಕ್ಕೆ ಬಂದ ಗುರುಗಳಿಗೆ ಅಭ್ಯಾಸಿ ಮತ್ತು ಮಕ್ಕಳು ಶಿಸ್ತಿನ ಗುಂಪು ಸ್ವಾಗತ ಕೋರಿತು. ಸಂಜೆ 5 ಗಂಟೆಗೆ ಆಂಧ್ರ ಪ್ರದೇಶದ ಅನೇಕ ಭಾಗಗಳಿಂದ ಬಂದಿದ್ದ ಸುಮಾರು 5000 ಅಭ್ಯಾಸಿಗಳಿಗೆ ಗುರುಗಳು ಸತ್ಸಂಗ ನಡೆಸಿಕೊಟ್ಟರು.

ಶನಿವಾರದಂದು ಗುರುಗಳು ಸಾಕಷ್ಟು ಮುಂಚಿತವಾಗಿಯೆ ಎದ್ದು ಬಂದು ಕೆಲಕಾಲ ಉಯ್ಯಾಲೆ ಮೇಲೆ ಕುಳಿತಿದ್ದು, ಮುಂಚೆ ಬಂದ ಅಭ್ಯಾಸಿಗಳಿಗೆ ನಲಿವು ತಂದಿತು. ಅನಂತರ ಅವರು ಧ್ಯಾನಮಂದಿರದೆಡೆಗೆ ನಡೆದುಬರುತ್ತಿದ್ದಾಗ, ಚಿಕ್ಕ ಹುಡುಗಿಯೊಬ್ಬಳು, “ಗುರುಗಳೆ, ಈ ದಿನ ನಿಮಗೆ ಶುಭವನ್ನು ತರಲಿ” ಎಂದು ಸ್ವಾಗತಿಸಿದಳು. ಗುರುಗಳು ಆಕೆಯನ್ನು ನೋಡಿ ನುಡಿದರು, “ ಉಹುಂ, ಈ ದಿನ ನಿಮಗೆ ಶುಭ ತರಲು ನಾನು ಬಂದಿದ್ದೇನೆ”. ಬೆಳಿಗ್ಗೆ 9 ಗಂಟೆಯ ಸತ್ಸಂಗ ಮುಕ್ತಾಯವಾದ ಮೇಲೆ ತಮಗೆ ಶುಭ ಕೋರಿದ ಅಭ್ಯಾಸಿಗಳಿಗೆ ಪ್ರತಿಕ್ರಯಿಸುತ್ತ ಗುರುಗಳು, ಅವರ ಅಧ್ಯಾತ್ಮಿಕ ಆರೋಗ್ಯದ ಬಗೆಗೆ ತಮಗೆ ಕಾಳಜಿ ಇರುವುದೆಂದು, ಅವರು ಉತ್ತಮವಾದ ಅಧ್ಯಾತ್ಮಿಕ ಅರೋಗ್ಯ ಪಡೆದುಕೊಂಡು, ಅದನ್ನು ಉಳಿಸಿಕೊಂಡು ಬರಲು ಶ್ರಮಿಸಬೇಕೆಂದು ತಿಳಿಸಿದರು.

ಭಾನುವಾರ ಬೆಳಿಗ್ಗೆ ಗುರುಗಳು ಸುಮಾರು 5500 ಅಭ್ಯಾಸಿಗಳಿಗೆ ಸತ್ಸಂಗವನ್ನು ನಡೆಸಿದರು. ಧ್ಯಾನಮಂದಿರದಿಂದ ಹೊರಬರುವಾಗ, ಅವರು ಇತ್ತೀಚಿಗೆ ಅಸ್ವಸ್ಥರಾಗಿದ್ದ ವೃದ್ಧ ಅಭ್ಯಾಸಿಯೊಬ್ಬರನ್ನು ವಿಚಾರಿಸಲು ನಿಂತರು. ಅವರಿಂದ ಹೊರಹೊಮ್ಮುತ್ತಿದ್ದ ಪ್ರೇಮ ಮತ್ತು ಕಾಳಜಿ ಬಹಳ ಹೃದಯಸ್ಪರ್ಶಿಯಾಗಿದ್ದವು. ನಾವು ವೃದ್ಧರಾದಂತೆ ವೈಯಕ್ತಿಕ ಶಿಸ್ತಿಗೆ ಹೆಚ್ಚಿನ ಬೆಲೆ ಕೊಡಬೇಕೆಂದು ಗುರುಗಳು ಅವರಿಗೆ ತಿಳಿಸಿದರು.

## 2011 ರ ಹೊಸ ವರ್ಷದ ಶುಭಾಶ0ಯಗಳು



2010 ಮುಕ್ತಾ0ಯವಾಗುವ ಸಮ0ಯ ಬರುತ್ತಿದ್ದಂತೆ, ಗುರುಗಳೊಂದಿಗಿರಲು ಅಭ್ಯಾಸಿಗಳ ಪ್ರವಾಹವೇ ಮಣಪ್ಪಾಕ್ಕಂ ಆಶ್ರಮಕ್ಕೆ ಹರಿದು ಬಂತು. ಅದು ಹಳೆ0ಯ ಲೆಕ್ಕಗಳನ್ನು ತೆಗೆದುಕೊಳ್ಳುವ ಸಮ0ಯವಾಗಿದ್ದಂತೆ ಹೊಸ ವರ್ಷವನ್ನು ಎದುರಿಸಲು ಸಿದ್ಧರಾಗಬೇಕಾಗಿದ್ದ ಸಮ0ಯ ಸಹ ಆಗಿತ್ತು.ಇದು ಅನಂತ ಸದವಕಾಶಗಳನ್ನೊಳಗೊಂಡ ಹಾಗು ಅವರು ಬ0ಯಸುವಂತೆ ನಾವಾಗಲು ಬದಲಾವಣೆ ಹೊಂದಲು ಒದಗಿರುವ ಅವಕಾಶ. ಅಶ್ರಮವು ವರ್ಣರಂಜಿತವಾಗಿ ದೀಪಾಲಂಕೃತಗೊಂಡಿತ್ತು ಮತ್ತು ಅಭ್ಯಾಸಿಗಳು ಒಬ್ಬರಿಗೊಬ್ಬರು ಭೇಟಿ0ಯಾಗಲು ಮತ್ತು ಶುಭ ಹಾರೈಸಲು ಸುಸಮ0ಯವಾಗಿತ್ತು.

ಪೂಜ್ಯ ಗುರುಗಳು ನಸುಕಿನಲ್ಲಿ0ಯೇ ಅತಿ ಬೇಗನೆ ಸಿದ್ಧರಾಗಿದ್ದು, ಶುಭಾಷ0ಯಗಳನ್ನು ಹೇಳಲು ಬಂದವರನ್ನು ಭೇಟಿ0ಯಾಗುತ್ತಿದ್ದರು. 7000ಕ್ಕೂ ಹೆಚ್ಚಿನ ಸಂಖ್ಯೆ0ಯಲ್ಲಿ ಅಭ್ಯಾಸಿಗಳು 2011ರ ಜನವರಿ 1ರ ಸತ್ಸಂಗದಲ್ಲಿ ಪಾಲ್ಗೊಂಡಿದ್ದರು. ಸಹೋದರ ಪಿ.ಆರ್.ಕೃಷ್ಣರವರು ಪುಟ್ಟ ಭಾಷಣವನ್ನು ಮಾಡಿದರು. ನಂತರ ಗುರುಗಳು ಸಂಗೀತಗಾರರಾದ ಸಹೋದರ ಕುಮರೇಶ್ ಮತ್ತು ಸಹೋದರಿ ಜ0ಯಂತಿ0ಯವರನ್ನು ಸತ್ಕರಿಸಿದರು.

## ದೀಪಾವಳಿ ಸಂಭ್ರಮ

ಮಣಪಾಕ್ಕಂನಲ್ಲಿದ್ದ ಗುರುಗಳ ಸನ್ನಿಧಿಯಲ್ಲಿರಲು ಸುಮಾರು 1000 ಅಭ್ಯಾಸಿಗಳು ನೆರೆದಿದ್ದರು. ಆಶ್ರಮದಲ್ಲಿ ನವೆಂಬರ್ 5ರಂದು ದೀಪಾವಳಿಯ ಆಚರಣೆ ಬಹಳ ಸಂತಸ, ನಲಿವುಗಳಿಂದ ನಡೆಯಿತು. ಗುರುಗಳು ಬೆಳಗಿನ ಸತ್ಸಂಗವನ್ನು ನಡೆಸಿಕೊಟ್ಟು, ನಮ್ಮ ಹೃದಯವನ್ನು ಅಗಾಧ ಪ್ರೇಮದಿಂದ ಬೆಳಗಿದರು.

ಗುರುಕುಟೀರವನ್ನು ಬಣ್ಣ ಬಣ್ಣದ ರಂಗೋಲಿಯಿಂದ ಬಹು ಅಂದವಾಗಿ ಸಿಂಗರಿಸಲಾಗಿದ್ದು, ಸುತ್ತಲಿನ ಪರಿಸರವು ದೀಪಗಳಿಂದ ಅಲಂಕೃತಗೊಂಡಿತ್ತು.

ನವೆಂಬರ್ 10ರಂದು ಗುರುಗಳು ಮಣಪಾಕ್ಕಂ ಆಶ್ರಮದಲ್ಲಿ ಸುಮಾರು 15 ಮದುವೆಗಳನ್ನು ನಡೆಸಿ ಆಶೀರ್ವದಿಸಿದರು. ಉಲ್ಲಾಸ ಹಾಗು ಆನಂದಭರಿತರಾಗಿದ್ದ ಅವರು ಕೆಲವು ದಂಪತಿಗಳಿಗೆ, ಆಧ್ಯಾತ್ಮಿಕ ದಾಂಪತ್ಯಕ್ಕಾಗಿ ತಾವು ಒಂದುಗೂಡಿಸಿದ ಕೈಗಳನ್ನೆಂದೂ ಬಿಡದಂತೆ ಸಲಹೆ ನೀಡಿದರು.





ಸಂಪುಟ 4 ಸಂಚಿಕೆ 1 ಜನವರಿ 2011

ಶ್ರೀ ರಾಮಚಂದ್ರ ಮಿಷನ್®

ಎಕ್ರೋಸ್ ಇಂಡಿಯಾ ವಾರ್ತಾಪತ್ರ





ಗುರುಗಳ ಆಶೀರ್ವಾದ ಪಡೆಯಲು ಅನೇಕ ತಾಯಂದಿರು ಮತ್ತು ತಾಯಿಯಾಗಲಿರುವ ಸೋದರಿಯರು ಸಾಲುಗಟ್ಟಿ ನಿಂತಿದ್ದರು. ಗುರುಗಳು ಅವರಲ್ಲೊಬ್ಬರಿಗೆ ಹೇಳಿದರು, "ಈ ಜಗತ್ತಿಗೆ ಒಂದು ಆರೋಗ್ಯಪೂರ್ಣ ಸಹಜಮಾರ್ಗ ಶಿಶುವನ್ನು ನೀಡಿ. ಅನಂತರ, ಅದನ್ನು ನಿಮ್ಮದು ಎನ್ನಮಾಡಿ. ಅದು ಸಹಜಮಾರ್ಗಕ್ಕೆ ಸೇರಿದೆ ಎಂಬುದು ನೆನಪಿರಲಿ".

ಗುರುಗಳು ಮಕ್ಕಳ ದಿನದಂದು, ಮೆಚ್ಚುವಂತಹ ಶಿಸ್ತಿನಿಂದ, ತಮಗೆ ಶುಭಾಶಯ ಹೇಳಲು ಬೆಳಗಿನಿಂದ ನಿಶ್ಶಬ್ದವಾಗಿ ಕಾಯುತ್ತಿದ್ದ ಮಕ್ಕಳೊಡನೆ ಸ್ವಲ್ಪ ಸಮಯ ಕಳೆದರು. ಅವರು "ನೀವು ಯಾವಾಗಲು ಸಹಜಮರ್ಗದ ಮಕ್ಕಳು ಎಂಬುದನ್ನು ನೆನಪಿಡಿ. ಎಲ್ಲರನ್ನು ಪ್ರೀತಿಸಿರಿ. ಪ್ರೀತಿಯಿಂದ ಬೆಳೆಯಿರಿ. ನಿಮ್ಮ ತಂದೆತಾಯಿಯರಿಗೆ ಮತ್ತು ಹಿರಿಯರಿಗೆ ವಿಧೇಯರಾಗಿರಿ. ನಿಮ್ಮೆಲ್ಲರಿಗೂ ಬಾಬೂಜಿ ಮಹಾರಾಜರ ಆಶೀರ್ವಾದಗಳು" ಎಂದರು.

ಸೋಮವಾರ, ನವೆಂಬರ್ 15ರಂದು ಗುರುಗಳು ಅಭ್ಯಾಸಿಯೊಬ್ಬರ ಸಂಸ್ಥೆಯ ನೂತನ ಆವರಣದಲ್ಲಿ ಸತ್ಸಂಗ ನಡೆಸಿದರು. ಅನಂತರ ದೊಮಲಗುಡ ಆಶ್ರಮಕ್ಕೆ ಹೊರಟ ಅವರು, ಆಶ್ರಮ ಪ್ರವೇಶಿಸಿದಾಗ ಬಾಬೂಜಿ ಮಹಾರಾಜರು ಮೇ 1967ರಲ್ಲಿ ದೊಮಲಗುಡ ಆಶ್ರಮವನ್ನು ಉದ್ಘಾಟಿಸಿದಾಗ ತೆಗೆದ ಭಾವಚಿತ್ರದ ಬಳಿ ಕೆಲಹೊತ್ತು ನಿಂತಿದ್ದರು. ನಂತರ, ಅವರು 500ಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಅಭ್ಯಾಸಿಗಳಿಗೆ ಸತ್ಸಂಗ ನಡೆಸಿದರು.

ನಗರದ ಉತ್ತರಭಾಗದಲ್ಲಿ ಪ್ರಾಂತೀಯ ಆಶ್ರಮ ಮತ್ತು ದಕ್ಷಿಣ ಭಾಗದಲ್ಲಿ ಕಾನ್ಹಾ ಯೋಜನೆಯ ಸ್ಥಳವಿದ್ದು, ದೊಮಲಗುಡ ಆಶ್ರಮವು ನಮ್ಮ ಗುರುಗಳು ಇನ್ನು ಮುಂದೆ ಭೇಟಿನೀಡಿದಾಗ ವಿಶ್ರಾಂತಿಧಾಮವಾಗಿರುತ್ತದೆ. ಗುರುಗಳು ಪ್ರಾಂತೀಯ ಆಶ್ರಮವನ್ನು ಉತ್ತರಕೈಲಾಸವೆಂದು, ಕಾನ್ಹಾವನ್ನು ದಕ್ಷಿಣ ಕೈಲಾಸವೆಂದು ವಿನೋದವಾಗಿ ಮಾತನಾಡುತ್ತ ಹೇಳಿದರು.

ಅವರು ಕಾನ್ಹಾ ಯೋಜನೆಯಲ್ಲಿ ಕಾರ್ಯನಿರತವಾಗಿದ್ದ ತಂಡವನ್ನು ಭೇಟಿಮಾಡಿ ಕೆಲವು ನಕ್ಷೆಗಳನ್ನು ಪರಿಶೀಲಿಸಿದರು. ತಮಗೆ ತೋರಿಸಲಾದ ಮೊದಲನೆಯ ನಕ್ಷೆ ತಮ್ಮ ನಿರೀಕ್ಷೆಯಂತೆ ಇದ್ದುದನ್ನು ಕಂಡು ಅವರು ಪ್ರಸನ್ನವದನರಾದರು. ಅವರು ನುಡಿದರು, " ನೋಡಿ, ಉನ್ನತ ಉದ್ದೇಶಗಳಿಗೆ ಹೊಂದಿಕೊಳ್ಳಲು ನಿಸರ್ಗ ಹೇಗೆ ತಾನೇ ವ್ಯವಸ್ಥೆ ಮಾಡುತ್ತದೆ" ಆಮೇಲೆ, ಗುರುಗಳು ಸಂಜೆ 4 ಗಂಟೆಗೆ ತುಮ್ಮುಕುಂಟ ಆಶ್ರಮಕ್ಕೆ ಬಂದು ಸೇರಿದರು.

ದಿನಾಂಕ 14ರ ಮಧ್ಯಾಹ್ನ ಮೋಡಕವಿದು ಲಘುವಾಗಿ ತುಂತುರು ಮಳೆಯಾಯಿತು. ಉಯ್ಯಾಲೆಯಲ್ಲಿ ಕುಳಿತ ಗುರುಗಳು ಕ್ಯಾಂಟೀನಿನಲ್ಲಿ ಯಾವ ತಿನಿಸು ತಯಾರಾಗುತ್ತಿದೆ ಎಂದು ಕೇಳಿದರು. ಯಾರೋ ಒಬ್ಬರು ಬಿಸಿ ಬಿಸಿ ತಿಂಡಿಯನ್ನು ತರಲು, ಗುರುಗಳು ಅದರ ರುಚಿ ನೋಡಿದರು ಮತ್ತು ಗೇಟಿನ ಹೊರಗೆ ತುಂತುರು ಮಳೆಯಲ್ಲಿ ಕಾಯುತ್ತಿದ್ದ ಅಭ್ಯಾಸಿಗಳಿಗೆ ಅದನ್ನು ಹಂಚಿ ಬಿಡಲು ಹೇಳಿದರು.

ಸಂಜೆ ಗುರುಗಳನ್ನು ಭೇಟಿಮಾಡಲು ಭಾರತೀಯ ವಾಯುದಳದಲ್ಲಿ ಕೆಲಸ ಮಾಡುತ್ತಿರುವ ಅಭ್ಯಾಸಿಗಳ ಒಂದು ತಂಡ ಬಂದಿತು, ಅವರನ್ನು ನೋಡಿ ಗುರುಗಳು ಉಲ್ಲಸಿತರಾದರು ಮತ್ತು ಮಂದಹಾಸದಿಂದ "ಆಕಾಶದಲ್ಲಿ ಹಾರಾಟ ನಡೆಸುವ ಎಲ್ಲ ಜನರೂ ಕುಳಿತುಕೊಳ್ಳುವಿರಾ?" ಎಂದು ಹೇಳಿ ಕುಟೀರದೊಳಗೆ ಅವರೆಲ್ಲರಿಗೂ ಒಂದು ಬೈಠಕ ಕೊಟ್ಟರು.

ದಿನಾಂಕ 17ರಂದು ಬಕ್ರೀದ್ ಪ್ರಯುಕ್ತ ರಜಾದಿನವಾದ್ದರಿಂದ ಅಭ್ಯಾಸಿಗಳ ಸಂಖ್ಯೆ ಅಧಿಕವಾಯಿತು. ಗುರುಗಳು ಬೆಳಿಗ್ಗೆ 9 ಗಂಟೆಯ ಸತ್ಸಂಗವನ್ನು ನಡೆಸಿ, ಹೈದರಾಬಾದಿನ ಒಂದು ಜೋಡಿಯ ನಿಶ್ಚಿತಾರ್ಥ ನೆರವೇರಿಸಿದರು. ಸೋದರ ಚಕ್ರಪಾಣಿಯವರು ಒಂದು ಅದ್ಭುತವಾದ ಭಾಷಣ ಮಾಡಿ, ನಮ್ಮ ಸಾಧನೆಯಲ್ಲಿ "ಹೊರಟು ಹೋಗಲಿ" ಎಂಬ ನಿಲುವನ್ನು ಅನ್ವಯಿಸುವುದರ ಬಗೆಗೆ ಒತ್ತು ಕೊಟ್ಟರು; ಧರ್ಮದರ್ಶಿ ಮನೋಭಾವವನ್ನು ಬೆಳೆಸಿಕೊಳ್ಳುವ ಅವ್ಯಶ್ಯಕತೆಯನ್ನು ಅವರು ವಿವರಿಸಿದರು.

ಸಂಜೆ ಸತ್ಸಂಗದ ನಂತರ, ಗುರುಗಳು ತಮ್ಮ ಕುಟೀರದಿಂದಲೇ ಸೋದರಿ ಸೌಮ್ಯ ಹಾಗು ಮಕ್ಕಳ ವಿಭಾಗದ ಐದು ಚಿಣ್ಣರೊಡನೆ ನಡೆಸಿಕೊಟ್ಟ ಭರತನಾಟ್ಯವನ್ನು ವೀಕ್ಷಿಸಿದರು.

18ರಂದು ಗುರುಗಳು ಜನರನ್ನು ಭೇಟಿ ಮಾಡುವುದರಲ್ಲಿ ಬೈಠಕ ಕೊಡುವುದರಲ್ಲಿ ಮತ್ತು ಗಣಕಯಂತ್ರದೊಡನೆ ಕೆಲಸಮಾಡುವುದರಲ್ಲಿ ನಿರತರಾಗಿದ್ದರು. ತಲೆನೋವಿದ್ದರೂ ಸಹ, ಅವರು ಕೇವಲ ತಮ್ಮ ಇಚ್ಛಾಶಕ್ತಿಯಿಂದಲೇ ಕೆಲಸ ಮಾಡುತ್ತಿದ್ದುದನ್ನು ಕಾಣಬಹುದಾಗಿತ್ತು. ಮಧ್ಯಾಹ್ನ 2.30ಕ್ಕೆ ಅವರು ಚೆನ್ನೈಗೆ ಹೊರಟರು.

## ಏಷಿಯಾ ಕಾರ್ಯಾಗಾರ

ಏಷಿಯಾ ಕಾರ್ಯಾಗಾರವು ಚೀನಾ, ಹಾಂಗ್‌ಕಾಂಗ್, ಜಪಾನ್, ಕೊರಿಯಾ, ಇಂಡೋನೇಶಿಯಾ, ಮಕೌ, ನೇಪಾಳ, ಶ್ರೀಲಂಕಾ, ಥೈಲಾಂಡ್ ಮತ್ತು ವಿಯೆಟ್ನಾಂ ದೇಶಗಳ ಸುಮಾರು 250 ಅಭ್ಯಾಸಿಗಳ ಭಾಗವಹಿಸುವಿಕೆಯಲ್ಲಿ ನವೆಂಬರ್ 29ರಿಂದ ಡಿಸೆಂಬರ್ 3ರ ವರೆಗೆ ನಡೆಯಿತು. ಇದರಲ್ಲಿ ಸಹೋದರ ಪಿ.ಆರ್.ಕೃಷ್ಣ, ಸಹೋದರ ಚಕ್ರಪಾಣಿ, ಸಹೋದರಿ ಶ್ರೀಮತಿ ರಾಥೋಡ್ ಮತ್ತು ಎನ್.ಪ್ರಕಾಶ್ ರವರ ಭಾಷಣಗಳಿದ್ದವು. ನವಂಬರ್ 28ರ ಸತ್ಸಂಗದ ನಂತರ ಗುರುಗಳು ಏಷಿಯಾದ ಪ್ರಥಮ ಆಶ್ರಮ (ಭಾರತದ ಹೊರಗೆ) ಮಲೇಷಿಯಾದಲ್ಲೆಂದು ಘೋಷಿಸಿದರು.

ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಚಾರಿತ್ರ್ಯ ನಿರ್ಮಾಣದ ಬಗ್ಗೆ ಮಾತನಾಡುತ್ತಾ ಬಾಬೂಜಿಯವರು ಹೇಳುತ್ತಾರೆ, "ನಿಮ್ಮನ್ನು ಔನ್ನತ್ಯಕ್ಕೇರಿಸುವ, ಉಜ್ವಲವಾಗಿಸುವ, ಸೌಹಾರ್ದತೆಯುಳ್ಳ, ಪ್ರೇಮಪೂರಿತರನ್ನಾಗಿ, ನಿಮ್ಮ ಅಂತರ್ಯದೊಳಗಿನದನು ಅದು ಏನೇ ಆಗಿರಲಿ ನಾನು ಬದಲಾಯಿಸಬಲ್ಲೆ. ಆದರೆ ಹೊರ ಪ್ರಪಂಚದೊಡನೆ ವ್ಯವಹರಿಸುವುದು ಅದು ನಿಮ್ಮ ಸಮಸ್ಯೆ. ನಿಮಗೆ ಇಚ್ಛಾಶಕ್ತಿಯಿದೆ. ಮನುಷ್ಯನಿಗೆ ಮಾತ್ರ ವಿಶೇಷವಾಗಿ ಇರುವ ಬುದ್ಧಿವಂತಿಕೆಯಿದೆ. .. ಅವರು ಹೇಳುವುದನ್ನು ಮಾತ್ರ ಕೇಳಿಸಿಕೊಳ್ಳಿರಿ, ಏನನ್ನೇ ನೋಡಿದರೂ ಅವರನ್ನೇ ಕಾಣಿ, ನಿಮಗೆ ಅವರು ಏನನ್ನು ಮಾಡಲು ಹೇಳುತ್ತಾರೋ ಅದನ್ನು ಮಾತ್ರ ಮಾಡಿ. ಅವರನ್ನು ಹಿಂಬಾಲಿಸಿ, ಮತ್ತು ಎಂದೆಂದಿಗೂ ಅವರೆಡೆಗಿನ ನಿಮ್ಮ ದೃಷ್ಟಿ ಅಲುಗದಿರಲಿ. ತಾಯಿಯ ತೋಳಿನಲ್ಲಿರುವ ಏನೂ ಅರಿಯದ ಮಗುವಿನಂತೆ







ಸಂಪುಟ 4 ಸಂಚಿಕೆ 1 ಜನವರಿ 2011
ಶ್ರೀ ರಾಮಚಂದ್ರ ಮಿಷನ್®
ವೀಕ್ಷಿಸಿದರು.
ಎಖೋಸ್ ಇಂಡಿಯಾ ವಾರ್ತಾಪತ್ರ

ಮುಗ್ಧತೆಯಿಂದ, ಆಕೆಗೆ ಬೇಕಾದಾಗ ನೀವಲ್ಲಿರುತ್ತೀರಿ".

ಗುರುಗಳು ಅನೌಪಚಾರಿಕವಾಗಿ ಕೆಲ ಸಮಯವನ್ನು ಅಭ್ಯಾಸಿಗಳೊಂದಿಗೆ ಕಳೆದರು. ಅವರು ಹೊಸ ಅಭ್ಯಾಸಿಗಳನ್ನು ಮೊದಲ ದಿನವೇ ಭೇಟಿ ಮಾಡಲು ಆಹ್ವಾನಿಸಿದರು. ಚೀನಾದ ಅಭ್ಯಾಸಿಗಳ ಬಳಿ ಅಧಿಕವಾದ ಪ್ರಶ್ನೆಗಳಿದ್ದು, ಗುರುಗಳು ಅವೆಲ್ಲಕ್ಕೂ ಸಹನೆಯಿಂದ ಉತ್ತರ ನೀಡಿದರು. ಇದಕ್ಕಾಗಿ ಒಬ್ಬರು ಅನುವಾದಕರಿದ್ದರು, ಕೆಲ ಕಾಲಾನಂತರ, ಅನುವಾದಕರು ತಮ್ಮ ಅನುವಾದವನ್ನು ಮುಗಿಸುವ ಮುಂಚೆಯೇ ಗುರುಗಳ ಉತ್ತರ ಬದ್ಧವಾಗಿರುತ್ತಿತ್ತು. ಆಶ್ಚರ್ಯವೆಂದರೆ, ಇಂಗ್ಲೀಷಿನ ಜ್ಞಾನವಿಲ್ಲದ, ಕೇವಲ ಚೀನಾಭಾಷೆಯಷ್ಟೇ ಬಲ್ಲ ಅಭ್ಯಾಸಿಗಳು ಅರ್ಥಮಾಡಿಕೊಂಡು ತಲೆಯಾಡಿಸುತ್ತಿದ್ದರು !

ಅಭ್ಯಾಸಿಯೋರ್ವರು ಗುರುಗಳನ್ನು ಚೀನಾದಲ್ಲಿ ಜನರು ಸಹಜಮಾರ್ಗದ ಬಗ್ಗೆ ಮುಕ್ತ ಭಾವನೆ ಹೊಂದಿಲ್ಲದಿರುವಾಗ ಅಲ್ಲಿ ಅಭ್ಯಾಸ ಮಾಡುವುದು ಹೇಗೆಂದು ಪ್ರಶ್ನಿಸಿದರು. ಅದಕ್ಕೆ ಗುರುಗಳು ಒಬ್ಬನು ಜನರನ್ನು ಆಕರ್ಷಿಸುವಂತೆ ಆದರ್ಶ ಪ್ರಾಯನಾಗಬೇಕು ಮತ್ತು ಈ ವಿಚಾರವಾಗಿ ನಿಜವಾಗ್ಯೂ ಭಯಪಡುವ ಅಥವಾ ಚಿಂತಿಸುವ ಅಗತ್ಯವಿಲ್ಲವೆಂದು ಹೇಳಿದರು.

ಅವರು ವಿವಿಧ ದೇಶಗಳ 58 ಪ್ರಶಿಕ್ಷಕರುಗಳನ್ನು ಭೇಟಿ ಮಾಡಿ ಪ್ರಶಿಕ್ಷಕರುಗಳ ಕಾರ್ಯಕ್ಕೆ ಸಂಬಂಧಿಸಿದ ಹಲವಾರು ಸರಳ ಆದರೆ ಸಂಗತ ಪ್ರಶ್ನೆಗಳಿಗೆ ಉತ್ತರಿಸಿದರು. ಹಾಗೆಯೇ ಅವರ ಕೋಣೆಗೇ ನೇರವಾಗಿ ಬಿತ್ತರಗೊಂಡ ಸಾಂಸ್ಕೃತಿಕ ಕಾರ್ಯಗಳನ್ನು ಸಹ ವೀಕ್ಷಿಸಿದರು.

ಬಾಬೂಜಿಯವರ ಮಲೇಶಿಯ ಹಾಗು ಸಿಂಗಪೂರ್ ಪ್ರವಾಸ ಮತ್ತು ಗುರುಗಳ ಮಲೇಶಿಯ, ಸಿಂಗಪೂರ್, ಜಪಾನ್ ಮತ್ತು ಚೀನಾದ ಪ್ರವಾಸದ ಬಗೆಗಿನ 20 ನಿಮಿಷ ಕಾಲಾವಧಿಯ ಕಿರು ಚಲನಚಿತ್ರವೊಂದು ಪ್ರದರ್ಶಿತವಾಯಿತು. ಗುರುಗಳು ಎಲ್ಲಾ ಪ್ರದೇಶಗಳೂ ಇಂತಹ ಚಿತ್ರಗಳನ್ನು ಪ್ರಸ್ತುತಪಡಿಸಬೇಕೆಂದು ಬಯಸಿದರು.

ಗುರುಗಳು ಡಿಸೆಂಬರ್ 3ರಂದು ಸತ್ಸಂಗವನ್ನು ನಡೆಸಿಕೊಟ್ಟ ನಂತರ ಸಮಾರೋಪ ಭಾಷಣವನ್ನೂ ಮಾಡಿದರು. ಅಲ್ಲಿ ಕಲಿಯಲು ಬೇಕಾದಷ್ಟು ಅವಕಾಶಗಳಿದ್ದವು, ಮುಖ್ಯವಾಗಿ ಚೀನಾ ಮತ್ತು ಫ್ರಾನ್ಸ್ ವಿನಿಮಯ ಕಾರ್ಯಕ್ರಮಗಳು ಮತ್ತು ಹಲವಾರು ವರ್ಷಗಳಿಂದ ತಾವು ನಡೆಸುತ್ತಿರುವ ವಿಧ ವಿಧ ಚಟುವಟಿಕೆಗಳನ್ನು ಎಲ್ಲಾ ಕೇಂದ್ರಗಳೂ ಪ್ರಸ್ತುತಪಡಿಸುತ್ತಿದ್ದವು. ಹೊಸದಾದ ವಿಚಾರಗಳು ಮತ್ತು ಪ್ರೇಮಪೂರಿತ ಹೃದಯದಿಂದ ಕೂಡಿದ್ದವು. ಈ ಕಾರ್ಯಾಗಾರದಲ್ಲಿ ಭಾಗವಹಿಸಿದ ಪ್ರತಿಯೊಬ್ಬ ಅಭ್ಯಾಸಿಯೂ ನವೀಕೃತ ಚೈತನ್ಯದ ಅನುಭವವನ್ನು ಹೊಂದುವುದರೊಂದಿಗೆ ತಮ್ಮ ತಮ್ಮ ದೇಶಗಳಲ್ಲಿ ಮಿಷನ್ನಿಗಾಗಿ ಇನ್ನೂ ಹೆಚ್ಚಿನ ಕೆಲಸ ಮಾಡುವುದಾಗಿ ತಮ್ಮ ಹೃದಯಗಳಲ್ಲೇ ಸಂಕಲ್ಪ ಮಾಡಿಕೊಂಡರು.

## ನೆರೆಯ ಆತಂಕ:

ಕೆಳಮಟ್ಟದ ಪ್ರದೇಶಗಳಾದ ಮಣಪಾಕ್ಕಂ, ಮುಗಳಿವಾಕ್ಕಂ ಮತ್ತು ಗೌರಿ ನಗರ ಪ್ರದೇಶಗಳಲ್ಲಿ ಅತಿವೃಷ್ಟಿಯು ಪ್ರವಾಹದ ಆತಂಕವನ್ನುಂಟುಮಾಡಿತು. ಅಕ್ಕಪಕ್ಕದಲ್ಲಿ ವಾಸವಾಗಿದ್ದ ಕೆಲ ಅಭ್ಯಾಸಿಗಳ ಮನೆಗಳಿಗೆ ನೀರು ನುಗ್ಗಿತ್ತು. ಗುರುಗಳು, ಎಲ್ಲರೂ ಆಶ್ರಮವನ್ನು ತೆರವು ಮಾಡಬೇಕೆಂದು ತಿಳಿಸಿ, ಮಣಪಾಕ್ಕಂಗೆ ಹೊರಟಿದ್ದ ಎಲ್ಲ ಹೊರ ಕೇಂದ್ರಗಳ ಅಭ್ಯಾಸಿಗಳಿಗೆ ತಮ್ಮ ಪ್ರವಾಸವನ್ನು ರದ್ದು ಮಾಡಲು ಮನವಿ ಮಾಡಿದರು. ಮಳೆ ನಿಲ್ಲುವವರೆಗೆ ಮತ್ತು ನೆರೆಯ ಆತಂಕ ಕರೆಯುವವರೆಗೆ ಆಶ್ರಮವನ್ನು ಮುಚ್ಚಲಾಗಿತ್ತು. ಬಿಕ್ಕಟ್ಟಿನ ಸಮಯದಲ್ಲಿ ಗುರುಗಳು ತೋರಿದ ಪ್ರೀತಿ ಮತ್ತು ಕಾಳಜಿ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು.



## ಯೂರೋಪಿನ ವಿಚಾರ ಸಂಕಿರಣ, ಡಿಸೆಂಬರ್ 18ರಿಂದ 23, 2010

ಯೂರೋಪಿನ ಬಹುತೇಕ ಪ್ರಮುಖ ವಿಮಾನನಿಲ್ದಾಣಗಳು ಹಿಮವರ್ಷದ ಕಾರಣ ಮುಚ್ಚಲ್ಪಟ್ಟಿದ್ದರೂ, ಡಿಸೆಂಬರ್ 18ರ ಹೊತ್ತಿಗೆ 1200ಕ್ಕಿಂತಲೂ ಹೆಚ್ಚು ಅಭ್ಯಾಸಿಗಳು ಗುರುಗಳ ಸನ್ನಿಧಿಗೆ ಬಂದು ಸೇರಿದರು.



ಇಂತಹ ಸಂಕಿರಣ ಪ್ರಥಮ ಬಾರಿಗೆ ಏರ್ಪಾಡಾಗಿದ್ದು, ಗುರುಗಳು ಪ್ರತಿನಿಧಿಗಳಿಗೆ ತಾವು ತಮ್ಮನೇ ಎದುರಿಸಲು ಧೈರ್ಯವಂತರಾಗಬೇಕೆಂದು ಮತ್ತು ಮನು ಕುಲದ ಭವಿಷ್ಯವನ್ನೂ ಬದಲಾಯಿಸಲು ಏನು ಮಾಡಬಹುದೆಂಬುದನ್ನು ಕುರಿತು ಮನನ ಮಾಡಿರೆಂದು ನುಡಿದಿದ್ದು ಕಾರ್ಯಕ್ರಮಕ್ಕೆ ಮುನ್ನುಡಿಯಾಯಿತು: "ಈ ಸಂಕಿರಣದಲ್ಲಿ ಲಭ್ಯವಿರುವ ನಿಜಕ್ಕೂ ಅಮೂಲ್ಯವಾದ ಸಮಯದಲ್ಲಿ ನೀವು ಇತರರೊಡನೆ ಕಾಡುಹರಟೆಯಲ್ಲಿ ತೊಡಗದಿರಿ. ನೀವು ಒಬ್ಬರೇ ಕುಳಿತು, ನಿಜಕ್ಕೂ ಪ್ರಾಮಾಣಿಕವಾಗಿ, ನಿಜಕ್ಕೂ ಗಾಢವಾಗಿ ಆತ್ಮಾವಲೋಕನ ಮಾಡಿಕೊಳ್ಳಲು, ಸಿದ್ಧವಾಗಿರಲು, ನಿಮ್ಮ ಹೃದಯ ನೀಡುವ ಉತ್ತರವನ್ನು ಒಪ್ಪಿಕೊಳ್ಳುವ ಮನಸ್ಸು ಮಾಡಲು ಅದನ್ನು ಬಳಸಿಕೊಳ್ಳಿ".



ಗುರುಗಳ ಕರೆಗೆ ಓಗೊಡಲು ಈ ಕಾರ್ಯಕ್ರಮದಲ್ಲಿ ತಕ್ಷಣ ಮರುಹೊಂದಾಣಿಕೆ ಮಾಡಲಾಯಿತು. ಸಂಕಿರಣದ ಕೇಂದ್ರೀಯ ಅಂಗವಾಗಿ ಅನೇಕ ಮೌನ ಮನನ ಕ್ಷಣಗಳನ್ನು ಅಳವಡಿಸಲಾಯಿತು. ಪ್ರತಿದಿನವೂ ಈ ಮೌನ ಮನನ ಕ್ಷಣಗಳು ಮತ್ತು ಮೂರು ಸತ್ಸಂಗಗಳ ಜೊತೆಗೆ ಗುರುಗಳು ತಾವೇ ಆರಿಸಿದ ವಿಷಯಗಳ ಮೇಲೆ ಮಾತನಾಡಲು ಕೆಲವೇ ಭಾಷಣಕಾರರನ್ನು ಆಯ್ಕೆ ಮಾಡಿದರು : ಸೋ. ಬಿ. ಚಕ್ರಪಾಣಿ  ಜೀವನ ಸಾಗರ, ಸೋ. ಪಿ.ಆರ್. ಕೃಷ್ಣ ಗುರು ಮತ್ತು ನಾನು, ಸೋ. ಸಂಸ್ಕೃತ ಕಣ್ಣನ್  ಗುರು ಮತ್ತು ಶಿಷ್ಯ,  ಮತ್ತು ಸೋ. ಕಮಲೇಶ ಪಟೇಲ್ – ನೈಜ ಸಾಧನೆ.




ಅಧಿವೇಶನಗಳಲ್ಲಿ ಅವರ ಭೌತಿಕ ಸನ್ನಿಧಿ ಇರದಿದ್ದರೂ, ಅವರ ದೂರದರ್ಶನಕ್ಕೆ ಸಂಪರ್ಕಿಸಲಾಗಿದ್ದ ವೀಡಿಯೋ ಪ್ರಸಾರ ವ್ಯವಸ್ಥೆಯಿಂದಾಗಿ, ಎಲ್ಲ ಭಾಷಣಗಳನ್ನೂ ಅವರು ತಮ್ಮ ಕೋಣೆಯಿಂದಲೇ ವೀಕ್ಷಿಸಿದರು. ಔಪಚಾರಿಕ ಸಭೆಯಾಗಲಿ ಅಥವಾ ತಮ್ಮ ಕುಟೀರದೊಳಗಿನ ಅನೌಪಚಾರಿಕ ಕೂಟಗಳಾಗಲಿ, ಸಂಕಿರಣದುದ್ದಕ್ಕೂ ಗುರುಗಳು ತಮ್ಮ ಸಂತಸವನ್ನು ವ್ಯಕ್ತಪಡಿಸುತ್ತಿದ್ದರು. ಅವರು, ತಮ್ಮ ಅನುಪಮ ಶೈಲಿಯಲ್ಲಿ, ವ್ಯಾಪಕವಾದ ಗಂಭೀರ ವಿಷಯಗಳನ್ನು ಕುರಿತಂತೆ ತಮ್ಮ ಅಭಿಪ್ರಾಯ ತಿಳಿಸಿದರು ಮತ್ತು ಗೃಹಸ್ಥ ಜೀವನ ಹಾಗು ಲೈಂಗಿಕತೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಪ್ರಚಲಿತವಿರುವ ನಿಷೇಧಗಳಿಗೆ ಸವಾಲೊಡ್ಡುವ ಧೈರ್ಯವನ್ನು ತೋರಿದರು.

ಅವರು ಬರ್ಲಿನ್ ಆಶ್ರಮದಲ್ಲಿರುವ ಕಟ್ಟಡದಲ್ಲೇ ಯೂರೋಪಿನ ಮೊಟ್ಟಮೊದಲ ಕ್ರೆಸ್ಟ್‌ನ ಸ್ಥಾಪನೆಯನ್ನು ಘೋಷಿಸಿದರು ಮತ್ತು 2011ರ ವಸಂತಕಾಲದಲ್ಲಿ ಅಭ್ಯಾಸಿ ತರುಣತರುಣಿಯರಿಗೆ "ಮನುಷ್ಯನೆಂದರೆ ಯಾರು ?" ಎಂಬ ವಿಷಯದ ಮೇಲೆ ಪ್ರಥಮ ಅಧಿವೇಶನವನ್ನು ವ್ಯವಸ್ಥೆ ಮಾಡಲು ಸೂಚಿಸಿದರು. ಅಲ್ಲದೆ ಡೆನ್ಮಾರ್ಕಿನ ವ್ರಾಡ್ಸ್ಯಾಂಡೆ ಆಶ್ರಮದ ಆವರಣದಲ್ಲೇ ಯೂರೋಪಿನ ಪ್ರಥಮ ಪುನಶ್ಚೇತನ ಕೇಂದ್ರ ಆರಂಭವಾಗುವುದೆಂದು ಪ್ರಕಟಿಸಿದರು. ತಮ್ಮ ಮುಕ್ತಾಯ ಭಾಷಣದಲ್ಲಿ, ಪ್ರತಿನಿಧಿಗಳು ತಮ್ಮ ಆಂತರ್ಯದಲ್ಲಿ 'ಜೀವನಾನಂದ'ವನ್ನು ಸೃಷ್ಟಿಸಿಕೊಳ್ಳಬೇಕೆಂದು ತಿಳಿಸಿ, ಊರಿಗೆ ಹಿಂತಿರುಗುತ್ತಿರುವ ಅವರಲ್ಲಿ ಅದೇ ಸ್ಥಿತಿಯನ್ನುಂಟು ಮಾಡಿ ಜೊತೆಗೆ ಯೂರೋಪ ಈಗ ಭಾರತದ ಒಂದು ಭಾಗವೆಂಬ ಭಾವನೆಯನ್ನು ತುಂಬಿಕಳುಹಿಸಿದರು.

ಸಂಪುಟ 4 ಸಂಚಿಕೆ 1 ಜನವರಿ 2011

ಶ್ರೀ ರಾಮಚಂದ್ರ ಮಿಷನ್®
ಎಥೋಸ್ ಇಂಡಿಯಾ ವಾರ್ತಾಪತ್ರ

# ಹೊಸ ಪ್ರಕಟನೆಗಳು



Messages Universal
Hard Bound



Messages Universal



HeartSpeak 2005
Tamil



HeartSpeak 2006
Telugu



Awaken our Consciousness
DVD English



A Celebration the Heart's Expression of its Gratitude
DVD English



Awaken to Truth
DVD English

ಈ ಎಲ್ಲಾ ಡಿ. ವಿ. ಡಿಗಳು ಇಂಗ್ಲೀಷ್, ಫ್ರೆಂಚ್, ಸ್ಪಾನಿಷ್, ಜರ್ಮನ್, ಇಟಾಲಿಯನ್, ರಷ್ಯನ್, ತಮಿಳು, ತೆಲುಗು, ಹಿಂದಿ ಮತ್ತು ಕನ್ನಡ ಭಾಷೆಗಳಲ್ಲಿ ಉಪ ಶೀರ್ಷಿಕೆಗಳನ್ನು ಒಳಗೊಂಡಿರುತ್ತವೆ.

## ಪ್ರಕಟಣೆಗಳು

### ಕ್ರೆಸ್ಟ್ – ಬರ್ಲಿನ್, ಜರ್ಮನಿ.

ಜರ್ಮನಿಯ ಬರ್ಲಿನ್ ನಲ್ಲಿರುವ ಸಹಜಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನದ ಸ್ವತ್ತನ್ನು ಗುರುಗಳು ಸಂಶೋಧನೆ, ಶಿಕ್ಷಣ, ಸಾಧನೆ ಮತ್ತು ತರಬೇತಿ (ಕ್ರೆಸ್ಟ್) ಕೇಂದ್ರವನ್ನಾಗಿ ವಿನ್ಯಾಸಗೊಳಿಸಿದ್ದಾರೆ. ಸಹೋದರ ಕ್ರಿಶ್ಚಿಯನ್ ಮಾಕೆಂಟಾಜ್ ಅವರನ್ನು ಇದರ ನಿರ್ದೇಶಕರನ್ನಾಗಿ ನೇಮಿಸಿದ್ದಾರೆ.

### 2011 ರ ವಸಂತ ಋತುವಿನ ತಂಡಗಳಿಗಾಗಿ ಸತ್ಖೋಲ್ ಅರ್ಜಿಗಳು

2011 ಜನವರಿಯಿಂದ ಮಾರ್ಚ್ ವರೆಗಿನ ತಂಡಗಳಿಗಾಗಿ ಸತ್ಖೋಲ್ ಅರ್ಜಿಗಳು ಈಗ ಈ ವೆಬ್ ವಿಳಾಸದಲ್ಲಿ ಲಭ್ಯವಿದೆ.

http://www.sahajmarg.org/smww/satkhol/application-guidelines

ದಯಮಾಡಿ ಅರ್ಜಿಗಳನ್ನು ಭರ್ತಿಮಾಡುವ ಮೊದಲು ಸೂಚನೆಗಳನ್ನು ಸರಿಯಾಗಿ ಪರಿಶೀಲಿಸಿರಿ.

ಅಂತರ್ಜಾಲದ ಸೌಲಭ್ಯವಿಲ್ಲದಿದ್ದಲ್ಲಿ ದಯಮಾಡಿ ನಿಮ್ಮ ಪ್ರಶಿಕ್ಷಕರ ಅಥವಾ ಕೇಂದ್ರ ಮುಖ್ಯಸ್ಥರ ಅಥವಾ ವಲಯ ಮುಖ್ಯಸ್ಥರ ಸಹಾಯವನ್ನು ಪಡೆಯಿರಿ. ಏನೇ ಪ್ರಶ್ನೆಗಳಿದ್ದಲ್ಲಿ ಸತ್ಖೋಲ್ ಅಶ್ರಮದ ಕಛೇರಿಯ ದೂರವಾಣಿ ಸಂಖ್ಯೆ : 044 22521099 ಅಥವಾ 044 42171111 ವಿ. 218 ಸಂಪರ್ಕಿಸಿ.

## ಗತಃಕಾಲಕ್ಕೊಂದು ಇಣುಕುನೋಟ



### ಚೆನ್ನೈನಲ್ಲಿ 1984ರಲ್ಲಿ ಬಾಬೂಜಿಯವರ 84ನೇ ಜನ್ಮ ದಿನೋತ್ಸವ

ಬಾಬೂಜಿಯವರ ಮಹಾಸಮಾಧಿಯ ನಂತರದ ಪ್ರಮುಖ ಆಚರಣೆಯೆಂದರೆ ಅವರ ಈ ಜನ್ಮದಿನಾಚರಣೆ, ಅದರಲ್ಲಿ ಭಾರತ ಮತ್ತು ಹೊರ ದೇಶಗಳಿಂದಲೂ ಸೇರಿದಂತೆ ಸುಮಾರು 3500 ಅಭ್ಯಾಸಿಗಳು ಪಾಲ್ಗೊಂಡಿದ್ದರು. ಚೆನ್ನೈನ ವಡಪಳನಿಯ ವಿಜಯಶೇಷ ಮಹಲ್ ಉತ್ಸವದ ಸ್ಥಳವಾಗಿದ್ದಿತು. ಅಭ್ಯಾಸಿಗಳ ವಸತಿಗಾಗಿ ಹತ್ತಿರದ ಕಲ್ಯಾಣ ಮಂದಿರಗಳಲ್ಲಿ ವ್ಯವಸ್ಥೆ ಮಾಡಲಾಗಿತ್ತು. ಹಾಗು ಪ್ರತಿ ದಿನವೂ ಅಭ್ಯಾಸಿಗಳನ್ನು ಕರೆತರಲು ಮತ್ತು ಬೀಳ್ಕೊಡಲು ಸಂಚಾರದ ವ್ಯವಸ್ಥೆ ಮಾಡಲಾಗಿತ್ತು. ಉತ್ಸವವು ಏಪ್ರಿಲ್ 29ರಂದು ಆರಂಭವಾಗಿ ಮೇ 1 ರಂದು ಮುಕ್ತಾಯಗೊಂಡಿತು. ಪ್ರತಿದಿನವೂ ಬೆಳಗಿನ ಮತ್ತು ಸಂಜೆಯ ಸತ್ಸಂಗಳನ್ನು ಗುರುಗಳು ನಡೆಸಿಕೊಟ್ಟರು. ಗುರುಗಳ ಪತ್ನಿ ಸಹೋದರಿ ಸುಲೋಚನಾ ರವರ ಸಕ್ರಿಯವಾದ ನೆರವಿನೊಂದಿಗೆ ಗುರುಗಳು ಉತ್ಸವದ ಪ್ರತಿ ವಿಚಾರಗಳಲ್ಲಿಯೂ ಬಹಳ ಆತ್ಮೀಯತೆಯಿಂದ ಕಾರ್ಯಮಗ್ನರಾಗಿದ್ದರು. ಅವರ ಕೃಪೆಯಿಂದ ವಾತಾವರಣವು ಆನಂದ, ಸಂತೋಷ, ಪ್ರೇಮ ಹಾಗು ಭ್ರಾತೃತ್ವ ಭಾವದಿಂದ ತುಂಬಿ ತುಳುಕುತಿತ್ತು. ಗುರುಗಳ ತಂದೆಯವರಾದ ಶ್ರೀ. ಸಿ. ಎ. ರಾಜಗೋಪಾಲಚಾರಿಯವರು ಸಹ ಉತ್ಸವದುದ್ದಕ್ಕೂ ಉಪಸ್ಥಿತರಿದ್ದರು. ಬಾಬೂಜಿಯವರ ಸಂದೇಶಗಳನ್ನೊಳಗೊಂಡ ಒಂದು ಕಿರು ಪುಸ್ತಕವನ್ನು ಈ ಉತ್ಸವದಲ್ಲಿ ಬಿಡುಗಡೆ ಮಾಡಲಾಯಿತು.

ಗುರುಗಳು 'ಮುಂದಿನ ಕಾರ್ಯ' ಎಂಬ ಸಂದೇಶವನ್ನು ನೀಡಿ ಬಾಬೂಜಿಯವರು ನಮ್ಮ ಮೇಲಿಟ್ಟುಕೊಂಡಿರುವ ಕನಸು ಹಾಗು ಅವರು ನಮಗಾಗಿ ನಿಶ್ಚಯಿಸಿರುವ ಗುರಿಯನ್ನು ತಲುಪಿ ಅವರ ಈ ಕನಸನ್ನು ನನಸಾಗಿಸಬೇಕಾಗಿರುವ ನಮ್ಮ ಕರ್ತವ್ಯವನ್ನು ನೆನಪಿಸಿದರು. ಸಂಸ್ಥೆಯ ಇತಿಹಾಸದಲ್ಲಿ ಅತಿ ಮುಖ್ಯವಾದ ಈ ಸಂದೇಶದಲ್ಲಿ ಗುರುಗಳು ಇದು ಅವರ ಸಂಕಲ್ಪ ವಾಗಿರುವುದರಿಂದ ಮುಂದಿನ ಕಾರ್ಯದ ಸಫಲತೆಯ ನಿಶ್ಚಿತತೆಯ ಬಗ್ಗೆ ನೆನಪಿಸಿದರು. ಪರಿವರ್ತನೆಯ ಅನಿವಾರ್ಯತೆಯು ನಮ್ಮ ಹೃದಯಗಳಲ್ಲಿ ಭರವಸೆಯಂತೆ ಪ್ರತಿಬಿಂಬಿಸುತ್ತದೆ ಹಾಗು ನಾವೇನಾಗಬೇಕೆಂದು ಅವರು ಬಯಸುವರೋ ಅದೇ ನಾವಾಗುವ ಭರವಸೆಯನ್ನು ನೀಡುತ್ತದೆ. ಈ ಆಧ್ಯಾತ್ಮಿಕ ಪರಂಪರೆಯು ಮುಂಬರುವ ಸಾವಿರಾರು ವರ್ಷಗಳ ಮಾನವತೆಯ ಸೇವೆಗಾಗಿ ನಮಗೆ ವಹಿಸಲ್ಪಟ್ಟಿರುವುದಾಗಿದೆ, ಆದುದರಿಂದ ಪ್ರಪಂಚದ ಎಲ್ಲೆಡೆಯಿರುವ ಆಧ್ಯಾತ್ಮಿಕ ಆಕಾಂಕ್ಷಿಗಳಿಗೆ ಪೀಳಿಗೆಯಿಂದ ಪೀಳಿಗೆಗೆ ಅದರ ಶುದ್ಧ ಮತ್ತು ಅಪರಿವರ್ತಿತ ರೂಪದಲ್ಲಿ ರವಾನಿಸಲ್ಪಡಬೇಕಾದ ಪವಿತ್ರತಮ ಜವಾಬ್ದಾರಿಯಾಗಿದೆ. ಕಡೆಯದಾಗಿ "ಏಳಿರಿ, ಎಚ್ಚರಗೊಳ್ಳಿರಿ ಮಾಡಬೇಕಾಗಿರುವ ಈ ದೈವೀಕತೆಯುಳ್ಳ ಕಾರ್ಯವು ಅವರ ತೃಪ್ತಿಗನುಗುಣವಾಗಿ ಸಂಪೂರ್ಣವಾಗುವವರೆಗೂ ವಿರಮಿಸದಿರಿ" ಎಂಬ ದುಂಧುಬಿ ಕರೆಗೆ ಗಮನ ಕೊಡಿ ಎಂದು ಅವರು ನಮ್ಮಲ್ಲಿ ಕೇಳಿಕೊಳ್ಳುತ್ತಿದ್ದಾರೆ.

(ಈ ಭಾಗವನ್ನು 'ಅಂಡ್ ಹಿ ಮಾರ್ಚಸ್ ಆನ್' ಜುಲೈ 24, 2007ರ ವಿಶೇಷ ಸ್ಮರಣ ಸಂಚಿಕೆಯಿಂದ ಆಯ್ದುಕೊಳ್ಳಲಾಗಿದೆ)

# ಹೊಸ ಜ್ಯೋತಿ ಕೇಂದ್ರಗಳು

## ಉದುಮಲ್‌ಪೇಟ್



ಉದುಮಲ್‌ಪೇಟ್ ಕೇಂದ್ರವು ಏಪ್ರಿಲ್ 1990 ರಲ್ಲಿ ಪ್ರಾರಂಭವಾಯಿತು. ಈಗ 3 ಪ್ರಶಿಕ್ಷಕರು ಮತ್ತು ಸುಮಾರು 150 ಅಭ್ಯಾಸಿಗಳಿದ್ದಾರೆ. ಉದುಮಲ್‌ಪೇಟ್ ಆಶ್ರಮವು ರಾಜಾವೂರಿನಲ್ಲಿದೆ. ಇದು ತುಂಬಾ ಸಹಜ ಸುಂದರ ಹಾಗು ಪ್ರಶಾಂತವಾದ ಸ್ಥಳವಾಗಿದೆ. ಇದಕ್ಕೆ ಗುರುಗಳು "ಶಾಂತಿ ಆಶ್ರಮ"ವೆಂದು ಹೆಸರಿಟ್ಟಿದ್ದಾರೆ. ಇದು ನಗರದ ಕೇಂದ್ರ ಭಾಗದಿಂದ ಸುಮಾರು 6 ಕಿ. ಮೀ ದೂರದಲ್ಲಿದೆ.

ಒಂದು ವರ್ಷದ ಕೆಳಗೆ ಗುರುಗಳ ಕಛೇರಿಯ ಉದ್ಘಾಟನೆಯಾಯಿತು ಹಾಗು ಆಶ್ರಮದ ಭೂಮಿಯ ನೋಂದಣಿಯಾಯಿತು. ಸುಮಾರು 5 ಎಕರೆ ಭೂಮಿಯನ್ನು ಆಶ್ರಮಕ್ಕಾಗಿ ಮೀಸಲಿಡಲಾಗಿದ್ದು, 8 ಎಕರೆಯಷ್ಟು ಭೂಮಿಯನ್ನು ಅಭ್ಯಾಸಿಗಳಿಗೆ ನಿವೇಶನಗಳಾಗಿ ಹಂಚಲಾಗಿದೆ.

ಮೊದಲ ಸತ್ಸಂಗವನ್ನು 5ನೇ ಡಿಸೆಂಬರ್ 2010 ರಂದು ಸಹೋದರ ಪ್ರಕಾಶ್ರವರು ನಡೆಸಿಕೊಟ್ಟರು. ಸುಮಾರು 75 ಅಭ್ಯಾಸಿಗಳು ಭಾಗವಹಿಸಿದ್ದರು. ಧ್ಯಾನ ಮಂದಿರವು 60 * 40 ಅಡಿಗಳಿದ್ದು ಸುಮಾರು 300 ಅಭ್ಯಾಸಿಗಳು ಕೂರುವಷ್ಟು ಸ್ಥಳಾವಕಾಶವಿದೆ.



## ದಿಂಡಿಗಲ್

ದಿಂಡಿಗಲ್ ಕೇಂದ್ರವು ಮಾರ್ಚ್ 1991 ರಲ್ಲಿ ಪ್ರಾರಂಭವಾಯಿತು. ಆರಂಭದ ದಿನಗಳಲ್ಲಿ ಸತ್ಸಂಗವು ಅಭ್ಯಾಸಿ ಸಹೋದರಿಯ ನಿವಾಸದಲ್ಲಿ ನಡೆಯುತ್ತಿತ್ತು. ಅಭ್ಯಾಸಿಗಳ ಸಂಖ್ಯೆ ಹೆಚ್ಚಾದಾಗ ಭಾನುವಾರದ ಸತ್ಸಂಗದ ಸ್ಥಳವು "ಅಮಲಾದೇವಿ" ಆಸ್ಪತ್ರೆಗೆ ಸ್ಥಳಾಂತರವಾಯಿತು.

ಎರಡು ವರ್ಷದ ಕೆಳಗೆ ಆಶ್ರಮದ ಭೂಮಿಯನ್ನು ವಾತಾಪರಾಯ್‌ನ್‌ಲ್ಲಿ ತೆಗೆದು ಕೊಳ್ಳಲಾಯಿತು. ಇದು ನಗರದಿಂದ 15 ಕಿ. ಮೀ ದೂರದಲ್ಲಿದೆ. ವಾತಾಪರಾಯಿಯ ಸುತ್ತಮುತ್ತಲೆಲ್ಲಾ ಮಲ್ಲಿಗೆ ಮತ್ತು ತೆಂಗಿನ ತೋಟಗಳಿವೆ. ಆಶ್ರಮವು ವತ್ಲಾಂಕುಂಡು ರಸ್ತೆಯಲ್ಲಿದೆ; ಅದು ತಮಿಳುನಾಡಿನ ಸುಂದರ ಗಿರಿಧಾಮವಾದ ಕೊಡೈಕೆನಾಲ್ ಮಾರ್ಗದಲ್ಲಿದೆ.

ಸುಮಾರು 2 ವರ್ಷಗಳ ಕಾಲ ಸತ್ಸಂಗವು ಆಶ್ರಮದ ಭೂಮಿಯಲ್ಲಿ ತಾತ್ಕಾಲಿಕ ವ್ಯವಸ್ಥೆಯಾಗಿದ್ದ ಗುಡಿಸಿಲಿನಲ್ಲಿ ನಡೆಯುತ್ತಿತ್ತು. ನಂತರ ಧ್ಯಾನ ಮಂದಿರವನ್ನು ನಿರ್ಮಿಸಲಾಯಿತು. ಧ್ಯಾನ ಮಂದಿರವು 60 * 40 ಅಡಿಗಳಷ್ಟಿದ್ದು ಸುಮಾರು 300 ಜನ ಕೂರುವಷ್ಟು ಸ್ಥಳಾವಕಾಶವಿದೆ. ಪೂಜ್ಯ ಗುರುಗಳು 5ನೇ ಡಿಸೆಂಬರ್ 2010ರ ನಂತರ ಧ್ಯಾನ ಮಂದಿರವನ್ನು ಉಪಯೋಗಿಸಲು ಅನುಮತಿ ನೀಡಿದ್ದಾರೆ. ಮೊದಲ ಸತ್ಸಂಗವನ್ನು ಸಹೋದರ ವಿಶ್ವನಾಥ ರಾವ್ ಅವರು ನಡೆಸಿಕೊಟ್ಟರು. ಸುಮಾರು 50 ಅಭ್ಯಾಸಿಗಳು ಸತ್ಸಂಗದಲ್ಲಿ ಭಾಗವಹಿಸಿದರು. ಮತ್ತೊಂದು ಸತ್ಸಂಗವನ್ನು ಸಹೋದರ ಎನ್. ಪ್ರಕಾಶ್ ಅವರು ಮಧ್ಯಾಹ್ನ 1 ಗಂಟೆಗೆ ನಡೆಸಿಕೊಟ್ಟರು. ತಿಂಗಳ ಮೊದಲನೇ ಭಾನುವಾರವಾಗಿದ್ದರಿಂದ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಅನೇಕ ಅಭ್ಯಾಸಿ ಸಹೋದರ ಸಹೋದರಿಯರು "ಹೃದಯ ವಾಣಿ" ಎಂಬ ವಿಷಯದ ಬಗ್ಗೆ ಮಾತನಾಡಿದರು ಮತ್ತು ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ವೈಯಕ್ತಿಕ ಆಧ್ಯಾತ್ಮಿಕ ಅನುಭವಗಳನ್ನು ಹಂಚಿಕೊಂಡರು. ಇದು ಮಂಗಳಕರವಾದ ರಂಭ ಹಾಗು ಪ್ರಯೋಜನೀಯ ಪೂರ್ಣದಿನದ ಕಾರ್ಯಕ್ರಮವಾಗಿತ್ತು.

## ತಿರುವಣ್ಣಾಮಲ್ಯೈ, ತಮಿಳುನಾಡು



ಚೆನ್ನೈನಿಂದ ಸುಮಾರು 185 ಕಿ. ಮೀ ದೂರದಲ್ಲಿರುವ ತಿರುವಣ್ಣಾಮಲ್ಯೈನಲ್ಲಿ ಹೊಸ ಜ್ಯೋತಿಕೇಂದ್ರವೊಂದು ಉದಯಿಸಿದೆ. ಸಹೋದರ ವೇಣು ಎಂಬ ಪ್ರಶಿಕ್ಷಕರು ಆಗಾಗ ಭೇಟಿನೀಡುವುದರ ಮೂಲಕ ಈ ಕೇಂದ್ರವು ಸುಮಾರು 10 ವರ್ಷಗಳ ಹಿಂದೆ ಪ್ರಾರಂಭವಾಯಿತು. ಅಂದಿನಿಂದಲೂ ಅದು ನಿಧಾನವಾದ ಪ್ರಗತಿಯನ್ನು ಕಂಡಿದ್ದು, ಧ್ಯಾನ ಮಂದಿರವನ್ನು ನಿರ್ಮಿಸಲು ಗುರುಗಳಿಂದ ಒಪ್ಪಿಗೆಯನ್ನು ಪಡೆದ ನಂತರ ಅತೀ ಕಡಿಮೆ ಅವಧಿಯಲ್ಲಿ ಕೆಲಸವು ಪೂರ್ಣವಾಯಿತು.

ನವೆಂಬರ್ 14ರಂದು ಧ್ಯಾನ ಮಂದಿರವನ್ನು ಉದ್ಘಾಟಿಸಲಾಯಿತು. ತಮಿಳುನಾಡು(ಉತ್ತರ) ವಲಯ ಮುಖ್ಯಸ್ಥರಾದ ಸಹೋದರ ಪ್ರಕಾಶ್ ಹಾಗು ಸುತ್ತಮುತ್ತಲಿನ ಅಭ್ಯಾಸಿಗಳು ಧ್ಯಾನ ಮಂದಿರದ ಉದ್ಘಾಟನೆಯಲ್ಲಿ ಪಾಲ್ಗೊಂಡರು. ಮಂದಿರವು ಭವ್ಯವಾದ ಬೆಟ್ಟಗುಡ್ಡಗಳ ನೋಟವನ್ನು ಹೊಂದಿದ್ದು, ಪ್ರಶಾಂತವಾದ ಹಾಗು ಪ್ರಶಂಸನೀಯ ವಾತಾವರಣವಣದಲ್ಲಿದೆ.

ಸಹೋದರರಾದ ಷಣ್ಮುಗನ್, ಪ್ರಕಾಶ್, ಲಕ್ಷ್ಮಿನಾರಾಯಣ, ತಿರುನಾವುಕ್ಕರಸುರವರು ಮಾತನಾಡಿದರು; ಸಹೋದರ ಶ್ರೀರಾಮನ್ ಅವರ ಭಾಷಣದೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

## ಆಶ್ರಮದ ಕಾರ್ಯಯೋಜನೆ–ಗುಲ್ಬರ್ಗಾ

ಗುಲ್ಬರ್ಗಾ ಕೇಂದ್ರವು ಹೊಸ ಆಶ್ರಮದ ಜೊತೆಗೆ, ವಸತಿ ಕಾಲೋನಿ ಕಾರ್ಯಯೋಜನೆಗಾಗಿ 34 ಎಕರೆಯಷ್ಟು ಭೂಮಿಯನ್ನು ಖರೀದಿಸಿದೆ. ಆಶ್ರಮದ ಹಾಗು ವಸತಿ ಸಮುದಾಯ ಯೋಜನೆಯ ವಿನ್ಯಾಸಕ್ಕೆ ನವೆಂಬರ್ 16ರಂದು ಗುರುಗಳು ಅನುಮತಿ ನೀಡಿದರು. ನಿರ್ಮಿಸಲು ಯೋಜಿಸಿರುವ ಈ ಹೊಸ ಆಶ್ರಮಕ್ಕೆ ಗುರುಗಳು "ಬಾಬೂಜಿ ಸ್ಮಾರಕ ಆಶ್ರಮ, ಗುಲ್ಬರ್ಗಾ" ಹಾಗು ವಸತಿ ಸಮುದಾಯಕ್ಕೆ "ಯೋಗ ಜೀವನ ಎನ್ಕ್ಲೇವ್" ಎಂಬುದಾಗಿಯೂ ನಾಮಕರಣ ಮಾಡಿರುವರು. ಈ ಜಾಗವು ಈಗಿರುವ ಆಶ್ರಮದಿಂದ 7. 5 ಕಿ. ಮೀ ದೂರದಲ್ಲಿದೆ.

ಸಂಪುಟ 4 ಸಂಚಿಕೆ 1 ಜನವರಿ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ಆಶ್ರಮದ ಭೂಮಿ, ಇಂದೋರ್



ಪೂಜ್ಯ ಗುರುಗಳು ಇಂದೋರ್ ಕೇಂದ್ರವನ್ನು 30 ಎಕರೆಗಳ ಮಹಾಯೋಜನೆಯಿಂದ ಆಶೀರ್ವದಿಸಿದ್ದಾರೆ. ಹೊಸ ಆಶ್ರಮದ ಭೂಮಿಯು ಈಗಿನ ಆಶ್ರಮದದಿಂದ ಸುಮಾರು 12 ಕಿ. ಮೀ ದೂರದಲ್ಲಿದೆ. ನವೆಂಬರ್ 14ರಂದು ಹೊಸ ಆಶ್ರಮದ ಭೂಮಿಯಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸುಮಾರು 600 ಸಹೋದರ-ಸಹೋದರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಹೊಸ ಕೇಂದ್ರ-ಪರಲಖೆಮುಂಡಿ, ಒರಿಸ್ಸಾ

ಹೊಸ ಕೇಂದ್ರವೊಂದು ಒರಿಸ್ಸಾ ವಲಯದ ಗಜಪತಿ ಜಿಲ್ಲೆಯ ಪರಲಖೆಮುಂಡಿಯಲ್ಲಿ ನವೆಂಬರ್ 2010 ರಲ್ಲಿ ಪ್ರಾರಂಭವಾಯಿತು. ಪರಲಖೆಮುಂಡಿ ಹಿಂದಿನಕಾಲದಲ್ಲಿ ರಾಜಮನೆತನದ ಭೂಮಿಯಾಗಿತ್ತು. ಕೇಂದ್ರವು ಪರಲಖೆಮುಂಡಿಯ ಕೇಂದ್ರಭಾಗದಿಂದ ಸುಮಾರು 5 ಕಿ. ಮೀ ದೂರದಲ್ಲಿದೆ.

ಈ ಕೇಂದ್ರದಲ್ಲಿ 19 ಹೊಸ ಆಕಾಂಕ್ಷಿಗಳಿಗೆ ಎರಡು ಪ್ರತ್ಯೇಕ ತಂಡಗಳಲ್ಲಿ ಆರಂಭಿಕ ಬೈಠಕಗಳನ್ನು ನೀಡಲಾಯಿತು. ಈ ಪ್ರದೇಶದಲ್ಲಿ ಪ್ರಶಿಕ್ಷಕರು ಇಲ್ಲದ ಕಾರಣ ಇತರ ಕೇಂದ್ರಗಳ ಪ್ರಶಿಕ್ಷಕರಿಂದ ಸೇವೆಯನ್ನು ಒದಗಿಸಲಾಗುತ್ತದೆ. ಸಹೋದರ ಸಂತೋಷ್ ಸಾಹುರವರು ಈಗಿನ ಎಲ್ಲಾ ಕಾರ್ಯಚಟುವಟಿಕೆಗಳನ್ನು ಸಂಘಟಿಸುತ್ತಿದ್ದಾರೆ(ಸಂಪರ್ಕ ಸಂಖ್ಯೆ-09937080707). ಈ ಕೇಂದ್ರವು ಒರಿಸ್ಸಾ ವಲಯದ 20ನೇ ಕೇಂದ್ರವಾಗಿದೆ.

## ಹಾಸನ ಕೇಂದ್ರದ 10ನೇ ವಾರ್ಷಿಕೋತ್ಸವ

ಹಾಸನದಲ್ಲಿ ಮಿಷನ್ನಿನ ಕೇಂದ್ರವನ್ನು ಸ್ಥಾಪಿಸಿದ 10ನೇ ವರ್ಷದ ಸ್ಮರಣಾರ್ಥವಾಗಿ ಈ ಕೇಂದ್ರದಲ್ಲಿ 5ನೇ ಡಿಸೆಂಬರ್,2010 ರಂದು ಪೂರ್ಣದಿನದ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಹತ್ತಿರದ ಕೇಂದ್ರಗಳಾದ ಚಿಕ್ಕಮಗಳೂರು, ತಿಪಟೂರು, ಬೆಂಗಳೂರು ಹಾಗು ಮೈಸೂರಿನ ಅಭ್ಯಾಸಿಗಳನ್ನೂ ಸಹ ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿತ್ತು.

ಕಾರ್ಯಕ್ರಮವು ಬೆಳಗಿನ ಸತ್ಸಂಗದಿಂದ ಪ್ರಾರಂಭವಾಯಿತು. ನಂತರ ಅಭ್ಯಾಸಿಗಳು "ಅಭ್ಯಾಸಿಯ ಪಾತ್ರ", "ಹತ್ತು ನಿಯಮಗಳು", "ಸಹಜಮಾರ್ಗ ಪದ್ಧತಿ ಮತ್ತು ಅದರ ಸರಳತೆ" ಹಾಗು "ಸಹಜಮಾರ್ಗ ಸಾಧನೆಯ ಮೂಲತತ್ವಗಳು" ಹೀಗೆ ವಿವಿಧ ವಿಷಯಗಳ ಬಗ್ಗೆ ಮಾತನಾಡಿದರು. ಮಧ್ಯಾಹ್ನದ ಭೋಜನದ ನಂತರ ಪ್ರಶ್ನೋತ್ತರ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಇದು ಅಭ್ಯಾಸಿಗಳಿಗೆ ಸಾಧನೆಯ ಬಗ್ಗೆ ತಮ್ಮ ಸಂದೇಹಗಳನ್ನು ಸ್ಪಷ್ಟಪಡಿಸಿಕೊಳ್ಳಲು ಸಹಾಯಕವಾಯಿತು. ಉಪನ್ಯಾಸಕರು ಒಬ್ಬ ಗುರುವು ತನ್ನ ಅಭ್ಯಾಸಿಗಳಿಗಾಗಿ ಅನುಭವಿಸುವ ಕಷ್ಟಗಳು ಮತ್ತು ಅವರು ಮಾಡುವ ತ್ಯಾಗದ ಬಗ್ಗೆ ವಿವರಿಸಿದರು. ಕಾರ್ಯಕ್ರಮವು ಸಂಜೆಯ ಸತ್ಸಂಗದೊಂದಿಗೆ ಮುಕ್ತಾಯವಾಯಿತು.

# ಗೃಹ ಕೂಟ

## ತೇನಿ ಜಿಲ್ಲೆ, ತಮಿಳುನಾಡು



ಬೋದಿನೈಕನುರ್ ಮತ್ತು ಕಂಬಮ್ ಪ್ರದೇಶದಲ್ಲಿ 23ನೇ ಅಕ್ಟೋಬರ್ 2010ರಂದು ಸಹೋದರ ಆರ್. ಸುಂದರಮ್ ಮತ್ತು ಸಹೋದರಿ ಸುಭಶ್ರೀ ಶ್ರೀನಿವಾಸ್ ಅವರು ಏರ್ಪಡಿಸಿದ್ದ ಗೃಹಕೂಟಗಳಲ್ಲಿ ತಮಿಳುನಾಡಿನ(ದಕ್ಷಿಣ) ವಲಯ ಮುಖ್ಯಸ್ಥರಾದ ಸಹೋದರ ವಿಶ್ವನಾಥ್ ರಾವ್ ಅವರು ಭಾಗವಹಿಸಿದರು. ಕೆಲವು ವರ್ಷಗಳಿಂದ ಸಾಧನೆಯನ್ನು ನಿಲ್ಲಿಸಿದ್ದ ಅಭ್ಯಾಸಿಗಳು ಕೂಟದಲ್ಲಿ ಭಾಗವಹಿಸಿ ತಾವು ಇನ್ನು ಮುಂದೆ ಸಾಧನೆಯನ್ನು ಮುಂದುವರಿಸುವುದಾಗಿ ಹೇಳಿದುದರಿಂದಾಗಿ ಬೋದಿನೈಕನುರಿನ ಕೂಟವು ಆಶ್ಚರ್ಯವನ್ನುಂಟುಮಾಡಿತು.

ಕಂಬಮ್‌ನಲ್ಲಿ ಮುನ್ನಾರ್ ಗಿರಿಯ ಬಳಿ ಇರುವ ಅಭ್ಯಾಸಿಯ ಮನೆಯೊಂದರಲ್ಲಿ ಸುಮಾರು 40 ಜನರು ನೆರೆದಿದ್ದರು. ಆಹ್ವಾನಿತರಿಗೆ ಸಹೋದರ ಸುಂದರಮ್ ಅವರು ಸಂಸ್ಥೆಯ ಪರಿಚಯ ಮಾಡಿಕೊಟ್ಟರು.

## ಹೈದರಾಬಾದ್

ಮಾಸಿಕ ಅಥವಾ ಸಾಪ್ತಾಹಿಕ ಗೃಹಕೂಟಗಳನ್ನು ಹಲವು ಉಪ-ಕೇಂದ್ರಗಳಲ್ಲಿ ಆಯೋಜಿಸಲಾಗುತ್ತದೆ. ಈ ಕೂಟಗಳನ್ನು, ಇರುವ ಅಭ್ಯಾಸಿಗಳು ಮತ್ತು ಸಾಧನೆಯಲ್ಲಿ ಆಸಕ್ತಿಹೊಂದಿರುವ ಜನರನ್ನು ಗಮನದಲ್ಲಿಟ್ಟುಕೊಂಡು ಮಾಡಲಾಗುತ್ತಿದೆ. ಅಭ್ಯಾಸಿಗಳು ತಮ್ಮನ್ನು ಅಭಿವ್ಯಕ್ತಗೊಳಿಸುವುದು, ಸಹಜಮಾರ್ಗದ ಮೂರು ಎಮ್ (ಮಾಸ್ಟರ್, ಮಿಷನ್, ಪದ್ಧತಿ) ಬಗ್ಗೆ ಆಳವಾಗಿ ತಿಳಿದುಕೊಳ್ಳುವುದು ಮತ್ತು ಎಲ್ಲರೂ ಒಂದೇ ಕುಟುಂಬಕ್ಕೆ ಸೇರಿದವರೆಂಬ ಭಾವನೆಯನ್ನು ಪೋಷಿಸುವುದು ಇದರ ಮುಖ್ಯ ಉದ್ದೇಶವಾಗಿದೆ.

ಅಧ್ಯಾತ್ಮದಲ್ಲಿ ಆಸಕ್ತಿ ಇರುವ ನೆರೆಮನೆಯವರು ಮತ್ತು ಸ್ನೇಹಿತರನ್ನು ಆಹ್ವಾನಿಸಿ ಅವರನ್ನು ಸಹಜಮಾರ್ಗ ಪದ್ಧತಿಗೆ ಪರಿಚಯಿಸಲಾಯಿತು. ಕೂಟವು ಅನೌಪಚಾರಿಕ ಮತ್ತು ಪ್ರತಿಸ್ಪಂದನದಿಂದ ಕೂಡಿ ಅಭ್ಯಾಸಿಗಳಿಗೆ ತಮ್ಮ ಹೃದಯಗಳನ್ನು ತೆರೆದುಕೊಳ್ಳಲು ಸಹಾಯವಾಯಿತು.

ಹೈದರಾಬಾದಿನ ಉಪಕೇಂದ್ರ ಮಲ್ಕಜ್‌ಗಿರಿಯಲ್ಲಿ ಸುಮಾರು 30 ಅಭ್ಯಾಸಿಗಳು ಕೆಲವು ವಾರಗಳಿಂದ ಪ್ರತಿ ಶನಿವಾರವೂ ಒಂದುಗೂಡಿ ಸಾಧನೆಯ ಕುರಿತ ಅನೇಕ ವಿಷಯಗಳ ಬಗ್ಗೆ ಚರ್ಚಿಸುತ್ತಾರೆ. ಇದರಿಂದಾಗಿ ಪ್ರತಿ ಅಭ್ಯಾಸಿಗೂ ತಮ್ಮನ್ನು ತಾವು ತೆರೆದುಕೊಳ್ಳುತ್ತಿರುವುದನ್ನು ಹಾಗು ಸಾಧನೆಯಲ್ಲಿ ಹೆಚ್ಚಿನ ತೀವ್ರತೆಯಿಂದ ತೊಡಗಿಸಿಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ.

## ಅಂಗುಲಿನಲ್ಲಿ ಕೌಟುಂಬಿಕ ಸ್ನೇಹಕೂಟ-ಒರಿಸ್ಸಾ

ಅಭ್ಯಾಸಿಗಳ ಕುಟುಂಬಗಳ ನಡುವೆ ಬಾಂಧವ್ಯವನ್ನು ಬೆಳೆಸಲು ಅನೌಪಚಾರಿಕ ಸ್ನೇಹಕೂಟವನ್ನು 9ನೇ ಡಿಸೆಂಬರ್ 2010ರ ಸಂಜೆ ಅಂಗುಲ್ ಕೇಂದ್ರದಲ್ಲಿ ಆಯೋಜಿಸಲಾಗಿತ್ತು. ಸ್ನೇಹಕೂಟವು ಅನೌಪಚಾರಿಕವಾಗಿದ್ದರೂ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಕೇಂದ್ರೀಕರಿಸಲಾಗಿತ್ತು. ಭಾಗವಹಿಸಿದವರು ಆಧ್ಯಾತ್ಮಿಕತೆಯಲ್ಲಿ ಮುಂದುವರೆಯಲು ಬೇಕಾದ ತಮ್ಮ ಚಿಂತನೆಗಳನ್ನು, ಅನುಭವಗಳನ್ನು ಮತ್ತು ಸಲಹೆಗಳನ್ನು ಹಂಚಿಕೊಂಡರು. ಈ ಸಂದರ್ಭದಲ್ಲಿ ಕೇಂದ್ರದ ಬೆಳವಣಿಗೆಗೆ ಬೇಕಾದ ಕೆಲವು ಉಪಯುಕ್ತ ಸಲಹೆಗಳು ಮತ್ತು ಅಭ್ಯಾಸಿಗಳನ್ನು ಈ ಕೆಲಸಗಳಲ್ಲಿ ತೊಡಗಿಸುವ ಮಾರ್ಗಗಳನ್ನು ಚರ್ಚಿಸಲಾಯಿತು. ಕೇಂದ್ರದ ಬೆಳವಣಿಗೆ ಮತ್ತು ಅದರ ಚಟುವಟಿಕೆಗಳ ಬಗ್ಗೆ ಚರ್ಚಿಸಲು ಈ ರೀತಿ 2 ತಿಂಗಳಿಗೆ ಒಮ್ಮೆಯಾದರೂ ಎಲ್ಲರೂ ಸೇರಲು ತೀರ್ಮಾನಿಸಿದರು.

ಸಂಪುಟ 4 ಸಂಚಿಕೆ 1 ಜನವರಿ 2011
ಶ್ರೀ ರಾಮಚಂದ್ರ ಮಿಷನ್®
ಎಖೋಸ್ ಇಂಡಿಯಾ ವಾರ್ತಾಪತ್ರ

## ಸಂಘಟನಕಾರರಿಗಾಗಿ ಸಭೆ, ಸೂರತ್



12ನೇ ಡಿಸೆಂಬರ್ 2010ರಂದು ಸೂರತ್ ಕೇಂದ್ರವು ವಲಯ ಮಟ್ಟದಲ್ಲಿ ಸಂಘಟನಕಾರರಿಗಾಗಿ ಒಂದು ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಿದ್ದಿತು. ಗೃಹಕೂಟಗಳು, ಮುಕ್ತಸಭೆಗಳು, ವಿ. ಬಿ. ಎಸ್. ಸಿ, ಪ್ರಬಂಧ ಲೇಖನ ಕಾರ್ಯಕ್ರಮ, ಆಶ್ರಿತ ಉಪ–ಕೇಂದ್ರಗಳ ಬೆಳವಣಿಗೆ ಇನ್ನೂ ಮುಂತಾದ ಚಟುವಟಿಕೆಗಳ ಬಗೆಗಿನ ವಿಷಯಗಳ ಕುರಿತ ಸ್ಪಷ್ಟೀಕರಣವೇ ಕಾರ್ಯಕ್ರಮದ ಉದ್ದೇಶವಾಗಿದ್ದಿತು. ದಕ್ಷಿಣ ವಲಯದ ಅನೇಕ ಕೆಂದ್ರಗಳಿಂದ ಸುಮಾರು 84 ಸಂಘಟನಕಾರರು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ಸಹೋದರ ಹಿರೇನ್ ಸಿಂಗ್(ವಲಯ ಮುಖ್ಯಸ್ಥ)ರವರು ಎಲ್ಲರನ್ನೂ ಸ್ವಾಗತಿಸಿದರು. ಸಹೋದರರಾದ ಸುರೇಶ್ ರಾಜಗೋಪಾಲನ್, ವಿಲಾಸ್ ಭೋಂಡೆ, ಸುರೇಂದ್ರ ಅಗರ್ವಾಲ್, ಸಹೋದರಿಯರಾದ ಸೌಮ್ಯ ರಾಜಗೋಪಾಲನ್, ವಿಭಾ ರಾಥೋಡ್ ಕಾರ್ಯಕ್ರಮದ ಮುಖ್ಯ ಉಪನ್ಯಾಸಕರಾಗಿದ್ದರು.

## ಮೂಡನಂಬಿಕೆಗಳು ಹಾಗು ಆಧ್ಯಾತ್ಮಿಕ ಬೆಳವಣಿಗೆ ಕುರಿತ ಚರ್ಚೆ,ಜೈಪುರ್(ಎ. ಪಿ)

31 ಅಕ್ಟೋಬರ್ 2010ರಂದು ಜೈಪುರ್ ಕೇಂದ್ರದಲ್ಲಿ ಮೂಢನಂಬಿಕೆ ಹಾಗು ಆಧ್ಯಾತ್ಮಿಕ ಬೆಳವಣಿಗೆ ವಿಷಯದ ಬಗ್ಗೆ ಅಭ್ಯಾಸಿಗಳು ಚರ್ಚಿಸಿದರು. ಅವರಲ್ಲಿ ಅನೇಕರು ತಮ್ಮ ಹಿಂದಿನ ನಂಬಿಕೆ ಹಾಗು ರೂಢಿಗಳ ಪರಿಣಾಮವಾಗಿ ಎದುರಿಸಿದ ಸನ್ನಿವೇಶಗಳು ಹಾಗು ಗುರುಗಳ ಮಾರ್ಗದರ್ಶನದಿಂದ ಈ ತೊಂದರೆಗಳಿಂದ ಹೇಗೆ ಹೊರಬಂದರೆಂಬುದನ್ನು ಹಂಚಿಕೊಂಡರು. ಕೆಲವು ಹೊಸ ಅಭ್ಯಾಸಿಗಳು ಇದೆಲ್ಲ ಹೇಗೆ ಸಾಧ್ಯವೆಂದು ಆಶ್ಚರ್ಯ ವ್ಯಕ್ತಪಡಿಸಿದರು. ಗುರುಗಳ ಮೇಲಿನ ಶ್ರದ್ಧೆಯೊಂದಿಗೆ ಬೆರೆತ ಕ್ರಮಬದ್ಧ ಸಾಧನೆಯಷ್ಟೇ ನಮ್ಮನ್ನು ಅವರೆಡೆಗೆ ತೆರೆದುಕೊಳ್ಳಲು ಸಹಾಯಮಾಡುವುದು ಎಂದು ಕೆಲ ಅನುಭವಿ ಅಭ್ಯಾಸಿಗಳು ವಿವರಿಸಿದರು. ಇದರ ನಂತರ ಸಂಸ್ಥೆಯ ಸಾಹಿತ್ಯದ ಬಗ್ಗೆ, ವಿಶೇಷವಾಗಿ "ದಿವ್ಯಲೋಕದ ಪಿಸುಮಾತುಗಳು" ಗ್ರಂಥದ ಬಗ್ಗೆ ಚರ್ಚಿಸಲಾಯಿತು. ಚರ್ಚೆಯ ಸಮಯದಲ್ಲಿ ಗುರುಗಳ ಪ್ರೇಮ ಹಾಗು ಮಾರ್ಗದರ್ಶನವನ್ನು ಎಲ್ಲರೂ ಅನುಭವಿಸಿದರು.

## ಆಧ್ಯಾತ್ಮಿಕ ಪುನಃಶ್ಚೇತನ, ಅಹ್ಮದಾಬಾದ್

ದೀಪಾವಳಿಯ ರಜಾದಿನಗಳಲ್ಲಿ ಅಹ್ಮದಾಬಾದ್ ಕೇಂದ್ರದಲ್ಲಿ 6 ದಿನಗಳ ಆಧ್ಯಾತ್ಮಿಕ ಪುನಃಶ್ಚೇತನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಗುಜರಾತಿನ ಅನೇಕ ಕೇಂದ್ರಗಳು ಸುಮಾರು 125 ಅಭ್ಯಾಸಿಗಳು ಈ ಕಾರ್ಯಕ್ರಮದ ಸದುಪಯೋಗ ಪಡೆದರು ಹಾಗು ಯೋಗಾಶ್ರಮದಲ್ಲಿ ತಂಗಿದ್ದರು. ಪ್ರತಿದಿನವೂ 2 ಸತ್ಸಂಗಗಳನ್ನು ನಡೆಸಿಕೊಡಲಾಗುತ್ತಿತ್ತು ಹಾಗು ಯೋಗ ತರಗತಿಗಳು, ಡಿ ವಿ ಡಿ ವೀಕ್ಷಣೆ, ವೈಯಕ್ತಿಕ ಬೈಠಕ ಹಾಗು ಸುವರ್ಣ ಮೌನಾವಧಿ ಮುಂತಾದ ಚಟುವಟಿಕೆಗಳನ್ನು ವೇಳಪಟ್ಟಿಯಂತೆಯೇ ಸರಿಯಾಗಿ ನಿರ್ವಹಿಸಲಾಯಿತು. ಎಲ್ಲರೂ ಸ್ವಯಂಸೇವೆಯಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಸಹೋದರ ಸುರೇಶ್ ರಾಜಗೋಪಾಲನ್ ಅವರಿಂದ ಸಾಧನೆಯ ಬಗ್ಗೆ ಸ್ಪಷ್ಟೀಕರಣದ ಪ್ರತಿಸ್ಪಂದನವನ್ನು ನಡೆಸಲಾಯಿತು. ಇದರ ನಂತರ ಪ್ರಶ್ನೋತ್ತರ ಕಾರ್ಯಕ್ರಮವಿದ್ದಿತು. ಸಹೋದರ ಧರ್ಮೇಶ್ ಹಾಗು ಸಹೋದರಿ ಕಸ್ತೂರಿಯವರು ವಿ. ಬಿ. ಎಸ್. ಸಿ ಕಾರ್ಯಕ್ರಮ ನಡೆಸಿಕೊಟ್ಟರು. ಕೆಲವು ಆರಂಭಿಕ ಬೈಠಕಗಳನ್ನೂ ಕಾರ್ಯಕ್ರಮದಲ್ಲಿ ಸೇರಿಸಿಕೊಳ್ಳಲಾಗಿತ್ತು.

## ಪುಸ್ತಕ ಪ್ರಕಟನೆ ತಂಡದ ಕಾರ್ಯಾಗಾರ–ದಕ್ಷಿಣ ಕರ್ನಾಟಕ



ಸಂಸ್ಥೆಯ ಪ್ರಕಟನೆಗಳನ್ನು ಎಲ್ಲಾ ಅಭ್ಯಾಸಿಗಳಿಗೆ ಪ್ರಯೋಜನೀಯವಾಗಿಯೂ, ಸಮರ್ಥಕವಾಗಿಯೂ ತಲುಪಿಸಲು ಸಹಾಯವಾಗುವಂತೆ ದಕ್ಷಿಣ ಕರ್ನಾಟಕದ ಅನೇಕ ಕೇಂದ್ರಗಳ ಸ್ವಯಂಸೇವಕರನ್ನು ತರಬೇತಿ ಗೊಳಿಸಲು, ಡಿಸೆಂಬರ್ 18–19ರಂದು ಮೈಸೂರಿನ ಆಶ್ರಮದಲ್ಲಿ ಒಂದು ದಿನದ ಪುಸ್ತಕ ಪ್ರಕಟನೆಯ ನಿವಾಸಿ ಕಾರ್ಯಾಗಾರವು ನಡೆಯಿತು. ಸುಮಾರು 15 ಕೇಂದ್ರಗಳ 54 ಸ್ವಯಂಸೇವಕರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಭಾಗವಹಿಸಿದ ಅಭ್ಯಾಸಿಗಳಿಗೆ ಪುಸ್ತಕ ಮಾರಾಟ, ಲೆಕ್ಕ ನಿರ್ವಹಣೆ, ಪುಸ್ತಕಗಳ ಶೇಖರಣೆಯ ವಿವರ, ಚಂದಾದಾರರ ಅರ್ಜಿಗಳನ್ನು ಸಂಗ್ರಹಿಸುವುದು ಹಾಗು ಮುಖ್ಯ ಕೇಂದ್ರಕ್ಕೆ ಅವುಗಳನ್ನು ತಲುಪಿಸುವುದು ಮತ್ತು ಸಂಸ್ಥೆಯ ಪ್ರಕಟನೆಗಳನ್ನು ವಿತರಿಸುವುದು ಹೀಗೆ ಅನೇಕ ಪ್ರಕ್ರಿಯೆಗಳನ್ನು ಅಭ್ಯಾಸಿಗಳಿಗೆ ಪರಿಚಯ ಮಾಡಿಸುವುದು ಹಾಗು ಅರ್ಥೈಸುವುದು ಕಾರ್ಯಕ್ರಮದ ಉದ್ದೇಶವಾಗಿತ್ತು.

ಅಭ್ಯಾಸಿಗಳನ್ನು ಹುರಿದುಂಬಿಸುವುದಕ್ಕಾಗಿ ಹಾಗೂ ತಮ್ಮ ತಮ್ಮ ಕೇಂದ್ರಗಳಲ್ಲಿ ಪ್ರಕಟನಾ ವಿಭಾಗದ ಉತ್ತಮವಾದ ಕಾರ್ಯನಿರ್ವಹಣೆಗಾಗಿ ಸಹಾಯ ಮಾಡಲು ಪುನರವಲೋಕನಕ್ಕಾಗಿ ಒಂದು ನಿಯಮಿತವಾದ ಯೋಜನೆಯನ್ನು ಮಾಡಿಕೊಳ್ಳಲಾಗಿದೆ.

## ವಡೋದರ–ಗುಜರಾತ್



ಅಕ್ಟೋಬರ್ 24ರಂದು ವಡೋದರದಲ್ಲಿ ಮುಕ್ತಸಭೆಯೊಂದು ಜರುಗಿತು. ಸ್ವಯಂಸೇವಕರ ಸಹಾಯದಿಂದ ಒ. ಎನ್. ಜಿ. ಸಿ ಕಾಲೋನಿ ಮತ್ತು ಅದರ ಸುತ್ತಮುತ್ತಲು ಸುಮಾರು 1500 ಆಹ್ವಾನಪತ್ರಿಕೆಗಳನ್ನು ವಿತರಿಸಲಾಗಿತ್ತು. ಕಾರ್ಯಕ್ರಮವು ಭಾನುವಾರದ ಬೆಳಗಿನ ಅಭ್ಯಾಸಿಗಳ ಸತ್ಸಂಗದೊಂದಿಗೆ ಪ್ರಾರಂಭವಾಯಿತು. ಆಹ್ವಾನಿತ ಅತಿಥಿಗಳು 10ಗಂಟೆಯ ನಂತರ ಬರಲು ಪ್ರಾರಂಭಿಸಿದರು. ಮೊದಲನೆಯ ಅವಧಿಯ ಕಾರ್ಯಕ್ರಮದಲ್ಲಿ "ಆಧ್ಯಾತ್ಮಿಕತೆ ಏಕೆ" ಎಂಬ ವಿಷಯದ ಬಗ್ಗೆ ಮಾತನಾಡುತ್ತಾ ಸಮತೋಲನದ ಜೀವನದ ಅವಶ್ಯಕತೆಯನ್ನು ಒತ್ತಿಹೇಳಲಾಯಿತು. ಸಹೋದರ ಕಮಲೇಶ್ ಪಟೇಲ್ ಅವರು ಸಹಜಮಾರ್ಗದ ಬಗ್ಗೆ ಒಂದು ಪಕ್ಷಿನೋಟವನ್ನು ನೀಡಿದರು. ಆಧ್ಯಾತ್ಮಿಕ ಪಯಣ ಕೈಗೊಳ್ಳಲು ಎಲ್ಲರನ್ನೂ ಆಹ್ವಾನಿಸಿದರು. ಶ್ರೋತೃಗಳು ಭಾಷಣಕಾರರ ಮಾತುಗಳನ್ನು ಬಹಳ ಅಸಕ್ತಿಯಿಂದ ಆಲಿಸಿದರು. ಚಹಾ ಸಮಯದಲ್ಲಿ ಪ್ರಶಿಕ್ಷಕರು ಸಾಧನೆಯನ್ನು ಪ್ರಾರಂಭಿಸಲು ಆಸಕ್ತಿಯಿರುವ ಅತಿಥಿಗಳ ಪ್ರಶ್ನೆಗಳಿಗೆ ಉತ್ತರಿಸಿದರು. ಪ್ರಶಿಕ್ಷಕರ ಸಂಪರ್ಕಮಾಹಿತಿಯಿರುವ ಪಟ್ಟಿಯೊಂದಿಗೆ ನಮ್ಮ ಆಶ್ರಮದ ನಕ್ಷೆಯನ್ನು ಎಲ್ಲ ಅತಿಥಿಗಳಿಗೆ ನೀಡಲಾಯಿತು. ಉಪಸ್ಥಿತರಿದ್ದ 170 ಅತಿಥಿಗಳಲ್ಲಿ ಸುಮಾರು 80 ಜನರು ಸಹಜಮಾರ್ಗವನ್ನು ಸೇರಲು ಆಸಕ್ತಿ ತೋರಿದರು ಹಾಗು ಅನೇಕರು ಬೈಠಕವನ್ನು ತೆಗೆದುಕೊಂಡರು.

ಸಂಪುಟ 4 ಸಂಚಿಕೆ 1 ಜನವರಿ 2011
ಶ್ರೀ ರಾಮಚಂದ್ರ ಮಿಷನ್®
ಎಕ್ರೋಸ್ ಇಂಡಿಯಾ ವಾರ್ತಾಪತ್ರ

# ಪೂರ್ಣದಿನದ ಕಾರ್ಯಕ್ರಮಗಳು

## ಚಿನ್ನವಲ್ಲಿ ಕುಲಂ ಆಶ್ರಮ, ವಿರುಧುನಗರ್, ತಮಿಳುನಾಡು

31ನೇ ಅಕ್ಟೋಬರ್ 2010ರಂದು ವಿರುಧುನಗರದ ಚಿನ್ನವಲ್ಲಿಕುಲಂ ಆಶ್ರಮದಲ್ಲಿ ಪೂರ್ಣದಿನದ ಕಾರ್ಯಕ್ರಮವು ಜರುಗಿತು. ವಿರುಧುನಗರ್, ಕೋವಿಲ್ಪಟ್ಟಿ ಮತ್ತು ಕರಿಯಪಟ್ಟಿ ಕೇಂದ್ರಗಳಿಂದ ಸುಮಾರು 44 ಅಭ್ಯಾಸಿಗಳು ಸೇರಿದ್ದರು. ಬೆಳಗಿನ ಸತ್ಸಂಗದ ನಂತರ, "ಚಾರಿತ್ರ್ಯ ನಿರ್ಮಾಣ", "ಸದಾಚಾರ ಮತ್ತು ನೈತಿಕತೆ" ಇದರ ಡಿ.ವಿ.ಡಿಗಳನ್ನು ತೋರಿಸಲಾಯಿತು. ಅಭ್ಯಾಸಿಗಳು ಚರ್ಚೆಯಲ್ಲಿ ಹಾಗು ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಬಹಳ ಉತ್ಸಾಹದಿಂದ ಭಾಗವಹಿಸಿದರು.

## ಮದುರೈ ಆಶ್ರಮ, ತಮಿಳುನಾಡು



ಅಕ್ಟೋಬರ್ 31ರಂದು ಮದುರೈನಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಸುಮಾರು 500 ಅಭ್ಯಾಸಿಗಳು ಮದುರೈ ಹಾಗು ಸುತ್ತಮುತ್ತಲಿನ ಕೇಂದ್ರಗಳಿಂದ ನೆರೆದಿದ್ದರು. ಸಹೋದರ ಪಿ. ಪಳನಿಯಪ್ಪನ್ ಅವರು ಪ್ರಾರಂಭಿಕ ಭಾಷಣವನ್ನು ಮಾಡಿದರು ಹಾಗು ಗುರುಗಳ ಭಾಷಣವನ್ನು ಕೇಳಿ, ಹೃದಯದಲ್ಲಿ ತುಂಬಿಕೊಂಡು, ಆಧ್ಯಾತ್ಮಿಕ ಪರಿಸರವನ್ನು ಆಸ್ವಾದಿಸುವಂತೆ ವಿನಂತಿಸಿದರು. ಸಹೋದರಿ ಎ. ಶಾಂತಕುಮಾರಿಯವರು, ಸಹಜಮಾರ್ಗದ ಮೂಲತತ್ವಗಳ ಬಗ್ಗೆ ಮಾತನಾಡಿದರು, ಸಹೋದರಿ ಪಳನಿಅಮ್ಮಾಳ್ ಅವರು ಸಾಧನೆಯ ಬಗ್ಗೆ, ಸಹೋದರಿ ಎ. ಜಿ. ತಂಗಮ್ ಅವರು ಹತ್ತು ನಿಯಮಗಳು ಮತ್ತು ಒಬ್ಬರ ಜೀವನದಲ್ಲಿ ಅದರ ಪಾತ್ರ, ಹಾಗು ಸಹೋದರಿ ಲತಾ ಶಿವರಾಮನ್ ಅವರು ಆಧ್ಯಾತ್ಮಿಕ ಬದಲಾವಣೆ ಇದರ ಬಗ್ಗೆ ಮಾತನಾಡಿದರು. ಸಹೋದರ ಪಿ. ಪಳನಿಯಪ್ಪನ್ ಅವರು ಗುರುಗಳು ಮಣಪ್ಪಾಕ್ಕಂನಲ್ಲಿ ಅಕ್ಟೋಬರ್ 1ರಂದು ನೀಡಿದ ಭಾಷಣ "ಅತ್ಯುನ್ನತವಾದ ಚಾರಿತ್ರ್ಯ" ದ ಬಗ್ಗೆ ವಿವರಿಸಿದರು. ಕಾರ್ಯಕ್ರಮವು ಸತ್ಸಂಗದೊಂದಿಗೆ ಕೊನೆಗೊಂಡು,ಈ ಚಿಂತನೆಗಳನ್ನು ಕ್ರೋಢೀಕರಣಗೊಳಿಸಲು ಸಹಾಯವಾಯಿತು.

ನವೆಂಬರ್ 14ರಂದು ವಲಯ ಮುಖ್ಯಸ್ಥ ಸಹೋದರ ಟಿ. ವಿ. ವಿಶ್ವನಾಥ್ ರಾವ್ ಅವರು ಮದುರೈ ಆಶ್ರಮದ "ಅಧ್ಯಯನ ಸ್ಥಳದ" ಉದ್ಘಾಟನೆಯನ್ನು ಮಾಡಲು ಬಂದಿದ್ದರು. ಭಾನುವಾರದ ಸತ್ಸಂಗಕ್ಕೆ 500 ಮಂದಿ ಸೇರಿದ್ದರು. ಅವರು "ಚಾರಿತ್ರ್ಯ ನಿರ್ಮಾಣ"ದ ಬಗ್ಗೆ ಮಾತನಾಡುತ್ತಾ ಗುರುಗಳು ನೀಡುವ ಪ್ರಾಣಾಹುತಿಯಿಂದಾಗುವ ಪರಿವರ್ತನೆಗೆ ಸಾಕ್ಷಿಯಂತೆ ಆಧ್ಯಾತ್ಮಿಕ ಮಾನವರಾಗಿ ನಾವು ಹೇಗೆ ವರ್ತಿಸಬೇಕೆಂಬುದನ್ನು ಒತ್ತಿ ಹೇಳಿದರು. ಅಧ್ಯಯನ ಸ್ಥಳವನ್ನು ಪ್ರಧಾನ ಕಾರ್ಯಾಲಯ, ಮಣಪಾಕ್ಕಮ್ ನೀಡಿದ ಜಿ. ಐ ಶೀಟುಗಳಿಂದ ನಿರ್ಮಿಸಲಾಗಿದೆ. ಈ ಕಾರ್ಯಕ್ರಮವನ್ನು ಮಕ್ಕಳ ದಿನಾಚರಣೆಯಂದು ನೆರವೇರಿಸಲಾಗಿದ್ದು, ಹಲವು ಮಕ್ಕಳ ಕಾರ್ಯಕ್ರಮಗಳನ್ನು ನಡೆಸಲಾಯಿತು. ಸುಮಾರು 70 ಮಕ್ಕಳು ಮತ್ತು ಅವರ ಪೋಷಕರು ಸಮಾರಂಭದಲ್ಲಿ ಸಂತೋಷದಿಂದ ಹಾಗು ಜವಾಬ್ದಾರಿಯಿಂದ ಪಾಲ್ಗೊಂಡರು.

## ಹರ್ದೋಯಿ, ಉತ್ತರ ಪ್ರದೇಶ

5ನೇ ಡಿಸೆಂಬರ್ 2010ರಂದು ಹರ್ದೋಯಿ ಕೇಂದ್ರದಲ್ಲಿ ಗುಂಪುಚರ್ಚೆಯೊಂದನ್ನು ಏರ್ಪಡಿಸಲಾಗಿತ್ತು. ಸಹೋದರ ಸಂಜಯ್ ಅವರು ಕಾರ್ಯಕ್ರಮವನ್ನು ನಡೆಸಿಕೊಟ್ಟರು ಹಾಗು ಅನೇಕ ಅಭ್ಯಾಸಿಗಳು ಪಾಲ್ಗೊಂಡಿದ್ದರು. ಅವರನ್ನು ಗುಂಪುಗಳಾಗಿ ವಿಂಗಡಿಸಲಾಗಿತ್ತು. "ಅಭ್ಯಾಸಿಯ ಆಧ್ಯಾತ್ಮಿಕ ವಿಕಾಸ" ಎಂಬುದು ಚರ್ಚೆಯ ವಿಷಯವಾಗಿತ್ತು. ಚರ್ಚೆಯ ಮುಖ್ಯಾಂಶಗಳನ್ನು ಗುಂಪಿನ ಸದಸ್ಯರು ಎಚ್ಚರಿಕೆಯಿಂದ ಟಿಪ್ಪಣಿ ಮಾಡಿಕೊಂಡರು. ಪ್ರತಿಯೊಂದು ಗುಂಪು ಕೆಲ ನಿಮಿಷ ತಾವು ಚರ್ಚಿಸಿದ ಅಂಶಗಳ ಬಗ್ಗೆ ಸಂಕ್ಷೇಪಿಸಿದರು, ಇದರೊಂದಿಗೆ ಚರ್ಚೆಯು ಮುಕ್ತಾಯವಾಯಿತು. ಹೃದಯ ಮುಟ್ಟುವಂಥ ಕಾರ್ಯಕ್ರಮವು ಭ್ರಾತೃತ್ವಭರಿತವಾಗಿದ್ದು, ಪ್ರೀತಿಯ ಗುರುಗಳಿಗೆ ಕೃತಜ್ಞತೆಯ ದ್ಯೋತಕವಾಗಿತ್ತು.

## ರಾಮನಾಥಪುರಮ್

ನವೆಂಬರ್ 21ರಂದು ರಾಮನಾಥಪುರಮ್ ಕೇಂದ್ರದಲ್ಲಿ ಕಾರ್ಯಕ್ರಮವು ನಡೆಯಿತು. ಸುಮಾರು 40 ಅಭ್ಯಾಸಿಗಳು, ರಾಮನಾಥಪುರಮ್, ಪರಮಕುಡಿ, ಮಾನಮದುರೈ ಹಾಗು ಶಿವಗಂಗೈ ಕೇಂದ್ರಗಳಿಂದ ಪ್ರಶಿಕ್ಷಕರು ಪಾಲ್ಗೊಂಡಿದ್ದರು. "ಆಧ್ಯಾತ್ಮಿಕತೆಯ ಪ್ರಾಮುಖ್ಯತೆ" ಎಂಬ ಗುರುಗಳ ಡಿ. ವಿ. ಡಿಯ ವೀಕ್ಷಣೆಯ ನಂತರ ಸಹಜಮಾರ್ಗದ ಅಭ್ಯಾಸಿಯು ಯಾವುದರ ಬಗ್ಗೆ ಹೆಮ್ಮೆ ಪಡಬಹುದು ಎಂಬುದರ ಬಗ್ಗೆ ಚರ್ಚಿಸಲಾಯಿತು.

## ಶಿವಗಂಗೈ

ನವೆಂಬರ್ 28ರಂದು ಈ ಕೇಂದ್ರದಲ್ಲಿ ಕಾರ್ಯಕ್ರಮವು ನಡೆಯಿತು, ಸುಮಾರು 20 ಅಭ್ಯಾಸಿಗಳು ಶಿವಗಂಗೈ, ಮಾನಮದುರೈ, ಪರಮಕುಡಿ, ರಾಮನಾಥಪುರಮ್ ಹಾಗು ಮದುರೈ ಕೇಂದ್ರಗಳಿಂದ ಪಾಲ್ಗೊಂಡಿದ್ದರು. ಗುರುಗಳ ನುಡಿಯಾದ "ನೀವು ಸಹಜಮಾರ್ಗವನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲವಾದರೆ, ನೀವು ಸಹಜಮಾರ್ಗವನ್ನು ಸರಿಯಾಗಿ ಪಾಲಿಸಲಾರಿರಿ" ಎಂಬ ಆಧಾರದ ಮೇಲೆ "ಧ್ಯಾನವೆಂದರೇನು", "ಧ್ಯಾನದ ಪ್ರಾಮುಖ್ಯತೆ", "ಸಹಜಮಾರ್ಗ ಧ್ಯಾನ" ಮತ್ತು "ಧ್ಯಾನದ ಪ್ರಯೋಜನಗಳು" ಎಂಬ ಅನೇಕ ವಿಷಯಗಳ ಬಗ್ಗೆ ಚರ್ಚಿಸಿದರು.









ಸಂಪುಟ 4 ಸಂಚಿಕೆ 1 ಜನವರಿ 2011
ಶ್ರೀ ರಾಮಚಂದ್ರ ಮಿಷನ್®
ಎಕೋಸ್ ಇಂಡಿಯಾ ವಾರ್ತಾಪತ್ರ







## ಪೂರ್ಣದಿನದ ಕಾರ್ಯಕ್ರಮ, ತಿರುಪ್ಪೂರ್

ಡಿಸೆಂಬರ್ 12ರಂದು ತಿರುಪ್ಪೂರಿನ ಡಿ. ಜೆ ಪಾರ್ಕಿನಲ್ಲಿ ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಾನುವಾರದ ಸತ್ಸಂಗದ ನಂತರ ವಲಯ ಮುಖ್ಯಸ್ಥರಾದ ಟಿ. ವಿ. ವಿಶ್ವನಾಥ್ ರಾವ್ ಅವರು ಇತ್ತೀಚೆಗೆ ಗುರುಗಳು ಏಷಿಯನ್ ಸೆಮಿನಾರಿನಲ್ಲಿ ನೀಡಿದ "ಮಾಡು ಇಲ್ಲವೆ ಮಡಿ" ಎಂಬ ಭಾಷಣವನ್ನು ಉಲ್ಲೇಖಿಸಿ ಮಾತನಾಡಿದರು.

"ಚ್ಯಾರಿತ್ರ್ಯ ನಿರ್ಮಾಣ" ಎಂಬುದು ಪೂರ್ಣದಿನ ಕಾರ್ಯಕ್ರಮದ ವಿಷಯವಾಗಿತ್ತು. ಸಹೋದರ. ಎಸ್. ಸುಂದರಮ್ ಅವರು ವಿಷಯದ ಬಗ್ಗೆ ಪ್ರಸ್ತಾವನೆ ಮಾಡಿದರು, ಚಾರಿತ್ರ್ಯ ನಿರ್ಮಾಣದ ಮೂಲತತ್ವಗಳನ್ನು ಪ್ರತಿಬಿಂಬಿಸುವ ವಿಷಯಗಳನ್ನು ಪ್ರಮುಖವಾಗಿ ವಿವರಿಸಲಾಯಿತು. ಭಾಗವಹಿಸಿದವರು ಪೂರ್ಣದಿನದ ಕಾರ್ಯಕ್ರಮವು ಬಹು ಪ್ರಯೋಜನಕಾರಿಯಾದುದನ್ನು ಅನುಭವಿಸಿದರು.

## ನಿಜ್ಞಾಮಾಬಾದಿನ ಬನ್ಸ್ವಾಡದ ವಿಧ್ಯಾರ್ಥಿಗಳನ್ನು ಕುರಿತು

ಡಿಸೆಂಬರ್ 11ರಂದು "ಮೌಲ್ಯಗಳು ಮತ್ತು ಆಧ್ಯಾತ್ಮ" ಎಂಬ ವಿಷಯದ ಬಗ್ಗೆ ಭಾಷಣವನ್ನು ನಿಜ್ಞಾಮಾಬಾದ್ ಜಿಲ್ಲೆಯ ಬನ್ಸ್ವಾಡದ ಶ್ರೀ ಕೃಷ್ಣವೇಣಿ ಟ್ಯಾಲೆಂಟ್ ಶಾಲೆಯಲ್ಲಿ ಆಯೋಜಿಸಲಾಗಿತ್ತು. ತಂಡದ ಸ್ಫೂರ್ತಿಯ ಬಗ್ಗೆ ಮಕ್ಕಳಾಡಿದ ಸರಳವಾದ ಆಟಗಳ ಮೂಲಕ ಮೌಲ್ಯಗಳನ್ನು ತಿಳಿಸಲಾಯಿತು. ಸುಮಾರು 16 ಶಿಕ್ಷಕರು ಮತ್ತು 1೦ಂದ 9ನೇ ತರಗತಿಯವರೆಗೆ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಬನ್ಸ್ವಾಡಿಯ ಸಾಯಿಕೀರ್ತಿ ಕಿರಿಯ ಕಾಲೇಜಿನವರೂ ಸಹ ಅದೇ ರೀತಿಯ ಕಾರ್ಯಕ್ರಮವನ್ನು ಅಯೋಜಿಸಲು ಸಂಸ್ಥೆಯನ್ನು ಆಹ್ವಾನಿಸಿದರು. 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಗು 20 ಬೋಧಕರು ಪ್ರತಿಸ್ಪಂದನದಲ್ಲಿ ಭಾಗವಹಿಸಿದರು. ಸಮತೋಲನದ ಜೀವನದ ಅಗತ್ಯ, ಮಾನವೀಯ ಮೌಲ್ಯಗಳು ಮತ್ತು ಅಧ್ಯಾತ್ಮ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸರಳ ಪ್ರಯೋಗಗಳ ಮುಖೇನ ವಿವರಿಸಲಾಯಿತು.

## ಸಹಜಮಾರ್ಗದ ಸೈನಿಕರು, ದಕ್ಷಿಣ ಕರ್ನಾಟಕ

ನವೆಂಬರ್ 13,14ರಂದು ತಮಿಳುನಾಡಿನ ನಾಟ್ರಂಪಲ್ಲಿ ಆಶ್ರಮದಲ್ಲಿ, ದಕ್ಷಿಣ ಕರ್ನಾಟಕದ 47 ಅಭ್ಯಾಸಿಗಳಿಗೆ "ಸಹಜಮಾರ್ಗದ ಸೈನಿಕರು" ಎಂಬ 2 ದಿನದ ನಿವಾಸಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

ಗುರುಗಳು, ಏಪ್ರಿಲ್ 2004ರಂದು ಬೆಂಗಳೂರಿನಲ್ಲಿ, "ಸಹಜಮಾರ್ಗದ ಸೈನಿಕರು" ಎಂಬ ಭಾಷಣ ನೀಡಿದ್ದರು, ಅದೇ ಈ ಕಾರ್ಯಕ್ರಮಕ್ಕೆ ಸ್ಫೂರ್ತಿಯಾಗಿತ್ತು. ಅವರು ಹೀಗೆ ಹೇಳಿದ್ದಾರೆ : "ಹಾಗಾಗಿ ದಯವಿಟ್ಟು ಅದಕ್ಕೆ ತಯಾರಾಗಿರಿ; ಅದು ಬಹಳ ಕ್ಲಿಷ್ಟವಾಗಲಿದೆ, ಆದರೆ ನಮಗೆ ಅಧ್ಯಾತ್ಮದ ಸೈನಿಕರು ಬೇಕು. .....ನಾವು ಕೇವಲ ನಮ್ಮದೇ ಆದ ಸಂಸ್ಕಾರವನ್ನು ಕೊಲ್ಲುತ್ತೇವೆ, ನಮ್ಮ ಕೆಟ್ಟ ಚಟಗಳನ್ನು, ನಮ್ಮದೇ ಆದ ನಕಾರಾತ್ಮಕ ಆಲೋಚನೆಗಳನ್ನು ನಾಶಮಾಡುತ್ತಾ, ನಾವು ನಮ್ಮೊಳಗಿಂದಲೇ ದೈವೀಮಾನವರಾಗಿ ಹೊರಹೊಮ್ಮುತ್ತೇವೆ".

ಈ ಕಾರ್ಯಕ್ರಮದ ಉದ್ದೇಶವೆಂದರೆ ದಕ್ಷಿಣ ಕರ್ನಾಟಕದಲ್ಲಿ ಸಹಜಮಾರ್ಗದ ಸೈನಿಕರಾಗಲು ಉತ್ತಮ ಸ್ವಯಂಸೇವಕರ ಬಳಗವನ್ನು ಕಟ್ಟುವುದು ಹಾಗು ಅವರಲ್ಲಿ ಸ್ಫೂರ್ತಿಯನ್ನು ತುಂಬುವುದು.

ಸಹಜಮಾರ್ಗದ ಜೀವನಮಾರ್ಗವನ್ನು ನಡೆಸುವುದು ಹೇಗೆ, ಇತರರಿಗೆ ಮಾದರಿಯಾಗಿರುವುದು, ಪ್ರಯೋಜನೀಯವಾಗಿ ಮತ್ತು ಸಮರ್ಥವಾಗಿ ಸ್ವಯಂಸೇವಕನಾಗುವುದು, ಅಭ್ಯಾಸಿಯ ವ್ಯಕ್ತಿತ್ವ, ಸಹಜಮಾರ್ಗದ ಸಾಧನೆಯನ್ನು ಸರಿಯಾಗಿ ಹಾಗು ಪರಿಣಾಮಕಾರಿಯಾಗಿ ಮಾಡುವುದು ಈ ರೀತಿಯಾಗಿ 5 ಪ್ರತಿಸ್ಪಂದನಗಳಿದ್ದವು.

ಒಬ್ಬ ಮಾದರಿ ಅಭ್ಯಾಸಿಯ ಗುಣಗಳನ್ನು ಪಟ್ಟಿ ಮಾಡುವಂತೆ ಹೇಳಿದಾಗ ಅಭ್ಯಾಸಿಗಳಿಗೆ, ಸಹಜಮಾರ್ಗ ಸರಳವಾಗಿದ್ದರೂ, ಮಾನವನ ಪರಿಪೂರ್ಣತೆ ಬಹಳ ಕಷ್ಟವಾದುದು ಮತ್ತು ಬಹಳಷ್ಟು ಸಮರ್ಪಣೆಯು ಅಭ್ಯಾಸಿಗಳಿಂದ ಬೇಕಾಗಿದೆ ಎಂದು ಭಾವಿಸಿದರು. ಹಾಗು ಈ ಕಾರ್ಯಕ್ರಮವು ಸಾಧನೆಯ ಬಗ್ಗೆ ಇರುವ ಮನೋಭಾವ ಬದಲಿಸುವುದೆಂದೂ ಹಾಗು ತಾವೆಲ್ಲರೂ ಕ್ರಮಬದ್ಧವಾಗಿ ಮಾಡುವವೆಂದು ಭಾವಿಸಿದರು.

## ಮಂಗಳೂರಿನ ಅಭ್ಯಾಸಿಗಳಿಗೆ ಕಾರ್ಯಗಾರ

ಸಹೋದರ ಮೋಹನ್ ದಾಸ್ ಅವರು ಅಕ್ಟೋಬರ್ 17ರಂದು 32 ಅಭ್ಯಾಸಿಗಳಿಗೆ ಕಾರ್ಯಗಾರವನ್ನು ಹಮ್ಮಿಕೊಂಡಿದ್ದರು. "ನನ್ನ ಗುರುದೇವ, ನನ್ನ ಪದ್ಧತಿ ಹಾಗು ನನ್ನ ಸಂಸ್ಥೆ" ಇದೇ ಕಾರ್ಯಕ್ರಮದ ಚರ್ಚೆಯ ವಿಷಯವಾಗಿತ್ತು. "ಜೀವನದಲ್ಲಿ ಗುರುವಿನ ಮಹತ್ವ" ಎಂಬ ಗುರುಗಳ ಡಿ. ವಿ. ಡಿಯನ್ನು ತೋರಿಸಲಾಯಿತು. ಅವರು "ಸಹಜಮಾರ್ಗದ ಗುರು ಪರಂಪರೆ" ಹಾಗು ಮಾನವತೆಯ ಆಧ್ಯಾತ್ಮಿಕ ವಿಕಸನಕ್ಕೆ ಅವರ ಕೊಡುಗೆ, ಆನಂತರ "ನನ್ನ ಪದ್ಧತಿ" ಎಂಬ ವಿಷಯದ ಬಗ್ಗೆ ಪ್ರಸ್ತುತಪಡಿಸಿದರು. ನಮ್ಮ ಸಾಧನೆಯ ಮುಖ್ಯ ಅಂಗಗಳ ಬಗ್ಗೆ ವಿವರಿಸಿದರು. ಸ್ವಯಂಸೇವೆಯ ಪ್ರಾಮುಖ್ಯತೆಯ ಬಗ್ಗೆ ಒತ್ತಿ ಹೇಳಿದರು. "ಗುರು ಮತ್ತು ಶಿಷ್ಯ" ಇದರ ದೃಶ್ಯಾವಳಿಯನ್ನು ತೋರಿಸಿದರು, ಇದರ ನಂತರ ವಿವಿಧ ವಿಷಯಗಳ ಮೇಲಿನ ಗುಂಪುಚರ್ಚೆಯು ನಡೆಯಿತು. ಸಹೋದರ. ಮೋಹನ್ ದಾಸ್ ಅವರು ಚ್ಯಾರಿತ್ರ್ಯ ನಿರ್ಮಾಣದ ಪ್ರಾಮುಖ್ಯತೆಯ ಬಗ್ಗೆ ಮಾತನಾಡುತ್ತಾ ಬಾಹ್ಯ ನಡವಳಿಕೆಯನ್ನು ಬದಲಾಯಿಸಿಕೊಳ್ಳುವುದು ಅಭ್ಯಾಸಿಯ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಕೊನೆಯಲ್ಲಿ ಸಹೋದರ ರಾಧಾಕೃಷ್ಣರವರು ಮಾತನಾಡುತ್ತಾ ಈ ರೀತಿಯ ಕಾರ್ಯಕ್ರಮಗಳು ಮಾನವ ಜೀವನದ ಗುರಿಯನ್ನು ಅತ್ಯಂತ ಶೀಘ್ರವಾಗಿ ತಲುಪಲು ಮೂರು ಎಮ್(3Ms ) ಗಳನ್ನು ಇನ್ನೂ ಉತ್ತಮವಾಗಿ ತಿಳಿಯುವುದಕ್ಕಾಗಿ ಹಾಗು ಗುರುಗಳು ನಮ್ಮಿಂದ ಬಯಸುವಂತೆ ಅಭ್ಯಾಸವನ್ನು ನಿಷ್ಠೆಯಿಂದ ಮಾಡುವುದಕ್ಕಾಗಿಯೆ ಇವೆ ಎಂದು ಹೇಳಿದರು.



# ಜ್ಯೋತಿ ಕೇಂದ್ರ

## ಕರೀಂನಗರ್ ಆಶ್ರಮ








ಕರೀಂನಗರವು ಆಂಧ್ರಪ್ರದೇಶದ ಜಿಲ್ಲಾ ಮುಖ್ಯ ಕೇಂದ್ರ ಹಾಗು ಎಸ್. ಆರ್. ಸಿ. ಎಮ್ ನ ಅತ್ಯಂತ ಹಳೆಯ ಆಶ್ರಮಗಳಲ್ಲೊಂದಾಗಿದೆ. ಈ ಜನನಿಬಿಡ ನಗರದಲ್ಲಿ 2 ಆಶ್ರಮಗಳಿವೆ. ಹಳೆಯ ಆಶ್ರಮವು ನಗರದಲ್ಲಿನ ಮಂಕಮ್ಮ ತೋಟದಲ್ಲಿದೆ ಹಾಗು ಹೊಸ ಆಶ್ರಮವು ನಗರದಿಂದ ಹೈದರಾಬಾದಿನ ಹೆದ್ದಾರಿಯಿಂದ (ಎನ್. ಹೆಚ್7) 15ಕಿ. ಮೀ ದೂರದಲ್ಲಿದೆ. ಕರೀಂನಗರದಲ್ಲಿ ಸಹಜಮಾರ್ಗವು 1975ರ ಮಾರ್ಚಿನಲ್ಲಿ ಉದಯಿಸಿತು. ಮೊದಲು ಸತ್ಸಂಗವು ಸಹೋದರ ಎನ್. ಎಸ್. ರಾಜು ಅವರ ಮನೆಯಲ್ಲಿ ನಡೆಯುತ್ತಿತ್ತು. 4ನೇ ಜುಲೈ 1979ರಂದು ಪೂಜ್ಯ ಬಾಬೂಜಿ ಮಹಾರಾಜರು ಶಾಶ್ವತವಾದ ಧ್ಯಾನ ಮಂದಿರವನ್ನು ನಿರ್ಮಿಸಲು ಅನುಮತಿ ನೀಡಿದರು.



### ಮಂಕಮ್ಮನ ತೋಟದಲ್ಲಿನ ಆಶ್ರಮ.

1980ರಲ್ಲಿ,ಸುಮಾರು 1000 ಚದರ ಗಜ ಅಳತೆಯ ಭೂಮಿಯನ್ನು ಖರೀದಿಸಿದ್ದರು ಹಾಗು ಗುರುಗಳು 1987ರ ಜನವರಿಯಲ್ಲಿ ಆಶ್ರಮವನ್ನು ಕಟ್ಟಲು ಅನುಮತಿ ನೀಡಿದರು. 1990ರಲ್ಲಿ ನಿರ್ಮಾಣವು ಸಂಪೂರ್ಣವಾಯಿತು.

ಗುರುಗಳು 1991 ಅಕ್ಟೋಬರ್ 9ರಂದು ಆಶ್ರಮವನ್ನು ಉದ್ಘಾಟಿಸಿದರು. ಇದು ಸಿಮೆಂಟಿನ ಕಟ್ಟಡವಾಗಿದ್ದು, 9 ಗುಂಟೆಯಷ್ಟು ಜಾಗದಲ್ಲಿ ನಿರ್ಮಿಸಲಾಗಿದೆ. 50*70 ಅಡಿಯ ಧ್ಯಾನ ಮಂದಿರ, ಒಂದು ಪಾಕಶಾಲೆ, ಸ್ನಾನಗೃಹ, 500 ಪುಸ್ತಕಗಳು/ ಶ್ರವಣಮಾಧ್ಯಮ/ದೃಶ್ಯಮಾಧ್ಯಮ/ಡಿ. ವಿ. ಡಿ ಇವೆಲ್ಲವುಗಳನ್ನೊಳಗೊಂಡ ವಾಚನಾಲಯವಿದೆ ಮತ್ತು ಒಂದು ಸುಸಜ್ಜಿತವಾದ ಗುರುಗಳ ಕೋಣೆಯಿದೆ.



### ಪಾರ್ಥಸಾರಥಿನಗರದಲ್ಲಿ ಆಶ್ರಮ

2004 ಏಪ್ರಿಲ್ 5ರಂದು ಗುರುಗಳು ಈ ಆಶ್ರಮವನ್ನು ಉದ್ಘಾಟಿಸಿದರು. ಇದು ಊರಿನ ಮಧ್ಯದಲ್ಲಿದೆ. ಒಟ್ಟಾಗಿ 16.5 ಎಕರೆಯಷ್ಟು ಭೂಮಿಯನ್ನು ಸಂಪಾದಿಸಿ, 4.5 ಎಕರೆಯನ್ನು ಆಶ್ರಮಕ್ಕೆ ಮೀಸಲಿಡಲಾಗಿದೆ.

ಆಶ್ರಮವು 50*60 ಅಡಿಯಿರುವ ಧ್ಯಾನ ಮಂದಿರವನ್ನು ಹೊಂದಿದೆ. ಇದರಲ್ಲಿ ಸುಮಾರು 300 ಅಭ್ಯಾಸಿಗಳು ಕುಳಿತುಕೊಳ್ಳುವಷ್ಟು ಸ್ಥಳಾವಕಾಶವಿದೆ, ಒಂದು ಪಾಕ ಶಾಲೆ, ಭೋಜನಾಲಯ, ವಾಚನಾಲಯ ಹಾಗು ಸ್ನಾನ ಗೃಹಗಳನ್ನೊಳಗೊಂಡಿದೆ. ಸುಸಜ್ಜಿತವಾದ ಗುರುಗಳ ಕುಟೀರವಿದೆ ಹಾಗು ಪಕ್ಕದಲ್ಲಿ ಅತಿಥಿಗೃಹವಿದೆ.



ಗುರುಗಳು ಉದ್ಘಾಟನಾ ಭಾಷಣದಲ್ಲಿ ಹೀಗೆ ಹೇಳಿದರು "ನಮಗೆ ನಮ್ಮ ಮನೆಯಲ್ಲಿಯೆ ವೈಕುಂಠ(ಸ್ವರ್ಗ) ಬೇಕು. ಇದು ಸಾಧ್ಯವಿದೆ, ಯಾವಾಗ ಎಂದರೆ ನೀವು ವೈಕುಂಠಕ್ಕೆ ಹೋಗುವ ಬದಲು ವೈಕುಂಠವೇ ನಿಮ್ಮ ಮನೆಗೆ ಬರುವಂತೆ ನಿಮ್ಮ ಹೃದಯವನ್ನು ಬೆಳೆಸಿಕೊಳ್ಳಬೇಕು. ಆದರೆ ಅದು ನಿಮ್ಮ ಹೃದಯವನ್ನವಲಂಬಿಸಿದೆ. ಆ ರೀತಿಯ ಹೃದಯವನ್ನು ಬೆಳೆಸಿಕೊಳ್ಳಲು ನೀವು ಇಂತಹ ಸ್ಥಳಗಳಿಗೆ ಬರಬೇಕಿದೆ".

ಮಾರ್ಚ್ 1987, ಫೆಬ್ರವರಿ 1989, ಅಕ್ಟೋಬರ್ 1991, ಡಿಸೆಂಬರ್ 1994, ಅಕ್ಟೋಬರ್ 1997, ಫೆಬ್ರವರಿ 2002 ಹಾಗು ಕಡೆಯದಾಗಿ 2004 ಏಪ್ರಿಲ್ ನಲ್ಲಿ ಗುರುಗಳು ಹಲವಾರು ಬಾರಿ ಭೇಟಿನೀಡಿದ್ದಾರೆ. ಒಮ್ಮೆ ಅವರು ಕರೀಂನಗರಕ್ಕೆ ಭೇಟಿ ನೀಡಿದ್ದಾಗ ಅವರು ಅದನ್ನು "ಕರೀಬ್ ನಗರ" ಅಂದರೆ ಅವರ ಹೃದಯಕ್ಕೆ ಹತ್ತಿರವಾದುದೆಂದು ಕರೆದಿದ್ದಾರೆ. ಅವರು ಹಲವು ಬಾರಿ ಭೇಟಿ ನೀಡಿದಾಗ ಭಾಷಣಗಳನ್ನು ನೀಡಿದ್ದಾರೆ. ಭಾಷಣಗಳ ಮಧ್ಯದಲ್ಲಿ ತೆಲುಗಿನಲ್ಲಿಯೂ ಮಾತನಾಡಿದ್ದಾರೆ. ಇದಕ್ಕಾಗಿ ಅಭ್ಯಾಸಿಗಳು ಕಾತುರದಿಂದ ಕಾಯುತ್ತಿದ್ದರು.

ಎರಡು ಪೂರ್ಣದಿನದ ಕಾರ್ಯಕ್ರಮಗಳನ್ನು ಆಚರಿಸಲಾಗುತ್ತದೆ: ಮೊದಲನೆಯದಾಗಿ ತಿಂಗಳಿನ ಎರಡನೇ ಭಾನುವಾರದಂದು ಪಾರ್ಥಸಾರಥಿನಗರ್ ಆಶ್ರಮದಲ್ಲಿ ಹಾಗು ಎರಡನೆಯದಾಗಿ ತಿಂಗಳ ಕೊನೆಯ ಭಾನುವಾರ ಮಂಕಮ್ಮನ ತೋಟದ ಆಶ್ರಮದಲ್ಲಿ ನಡೆಯುತ್ತದೆ. ಸುಮಾರು 250 ಅಭ್ಯಾಸಿಗಳು ಹಾಗು 70 ಮಕ್ಕಳು ನಿಯಮಿತವಾಗಿ ಈ ಮಾಸಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾರೆ. "ಆದುದರಿಂದ ನೀವು ಇಲ್ಲಿ ಬಂದು ಧ್ಯಾನಿಸುವ ಅವಶ್ಯಕತೆಯನ್ನು ಅರ್ಥಮಾಡಿಕೊಂಡಿರುವಿರಿ ಎಂದು ನಾನು ಭಾವಿಸುತ್ತೇನೆ. ಇದರಿಂದ ನಿಮ್ಮ ಹೃದಯವು ವಿಶಾಲವಾಗುತ್ತದೆ, ಶುದ್ಧೀಕರಣವು ಅದರಲ್ಲಿರುವ ಎಲ್ಲ ಸ್ಥೂಲತೆಯನ್ನು ಹೊರಹಾಕುತ್ತದೆ, ಗುರುಗಳು ಎಂದೆಂದಿಗೂ ನಿಮ್ಮೊಳಗೆ ನೆಲೆಸಲು ಸರಿಹೊಂದುವಂತೆ ತಯಾರಿಸುತ್ತದೆ" ಎಂದು ಹಿಂದೊಮ್ಮೆ ಗುರುಗಳು ಹೇಳಿದ್ದನ್ನು ಮನದಲ್ಲಿಟ್ಟುಕೊಂಡೇ ಆಶ್ರಮದ ಎಲ್ಲಾ ಚಟುವಟಿಕೆಗಳನ್ನು ನಡೆಸಲಾಗುತ್ತದೆ.

**To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org**

© 2011 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.